

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಹೊಸಮನಿ

Editor : MARUTI BASAVANTAPPA HOSAMANI

Cell : +91 97413 19119

Volume : 06 Issue : 191 Sunday 17-12-2023 E-mail : maruti.b.hosamani76@gmail.com Page: 4 Price : Rs. 1/-


## ಪಿಡಿಓ ಲತಾಬಾಯಿ ಕಾರ್ಯವೈಖರಿಗೆ ಸಾರ್ವಜನಿಕರ ಆಕ್ರೋಶ-ಕ್ರಮಕ್ಕೆ ಶಾಸಕರಲ್ಲಿ ಆಗ್ರಹ

ನಡು ಮಾವಿನಹಳ್ಳಿ : ಕೊಟ್ಟೂರು ತಾಲೂಕಿನ ಕಾಳಾಪುರ ಗ್ರಾಮ ಪಂಚಾಯತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಇಲ್ಲದೆ ಕಂಗಾಲದ ಸಾರ್ವಜನಿಕರು ಸುಮಾರು ಐದು ಆರು ದಿನಗಳಾದರೂ ಪಿಡಿಓ ಲತಾಬಾಯಿ ನಡು ಮಾವಿನಹಳ್ಳಿ ಗ್ರಾಮಕ್ಕೆ ತಿರುಗಿ ಸಹ ನೋಡಿಲ್ಲವಂತೆ ಹೀಗಾದರೆ ಇಲ್ಲಿನ ಸಾರ್ವಜನಿಕರು ಗತಿ ಏನು? ನಡು ಮಾವಿನಹಳ್ಳಿಯಲ್ಲಿ ಐದು ದಿನಗಳಾದರೂ ನೀರು ಬರುತ್ತಿಲ್ಲ ಕುಡಿಯಲು ಬಳಸಲು ನೀರಿಲ್ಲ.

ಕೊಟ್ಟೂರು ತಾಲೂಕಿನಲ್ಲಿ ತಾಲೂಕಾ ಪಂಚಾಯತಿ ಗ್ರಾಮ ಪಂಚಾಯತಿಗೆ ಸುದ್ದಿ ಕೇಳಿ ಸಾರ್ವಜನಿಕರ ಸಮಸ್ಯೆ ಕೇಳಿ ಜನರು ರೋಸಿ ಹೋಗಿದ್ದಾರೆ.ಈ ಕಾಳಾಪುರ ಗ್ರಾಮ ಪಂಚಾಯತಿಯಲ್ಲಿ ನೈನ್ ಅಂಡ್ ಲೆವೆನ್ ಗೆ ಅರ್ಜಿ ಸಲ್ಲಿಸಿದರೆ ಸುಮಾರು ದಿನಗಳಿಂದ ನೈನ್ ಅಂಡ್ ಇಲೆವೆನ್ ಕೊಡುತ್ತಿಲ್ಲವಂತೆ ಇವರು ಹಣಕ್ಕಾಗಿ ಕಾಲಹರಣ ಮಾಡುತ್ತಾರೆ ಎಂದು ಮೇಲೆ ನೋಟಕ್ಕೆ ತಿಳಿಯುತ್ತದೆ ಮತ್ತು ಒಂದು ನೈನ್ ಅಂಡ್ ಇಲೆವೆನ್ ಫಾರಂ ಸರ್ಕಾರಿ ಫೀ ಕೇವಲ ರೂ.50 ಇದ್ದರೆ ಇದಕ್ಕೆ 5,000 ಖರ್ಚು ಆಗುತ್ತದೆ ಎಂದು ಹೇಳುತ್ತಾರಂತೆ ನಡು ಮವಿನಹಳ್ಳಿ ಗ್ರಾಮದಲ್ಲಿ ಸುಮಾರು 20 ಅರ್ಜಿಗಳನ್ನು ನೈನ್ ಅಂಡ್ ಲೆವೆನ್ ಕೊಡಲು ಹಿಂದೇಟು ಹಾಕುತ್ತಿದ್ದಾರಂತೆ ಇಂಥಹ ಮಳೆ ಹೋದ ಬರಗಾಲದ ಟೈಮಿನಲ್ಲೂ ಇವರಿಗೆ ಸಾರ್ವಜನಿಕರು ಪರದಾಡುವ ಪರಿಸ್ಥಿತಿ ನಮ್ಮ ಕೊಟ್ಟೂರಿನ ತಾಲೂಕಾ ಗ್ರಾಮ ಪಂಚಾಯಿತಿಗಳು ದುರ್ಬಳಕೆ ಆಗಿವೆಯಂತೆ ಹಾಗೂ ಊರಿನ ಚರಂಡಿ ಮತ್ತು ಸ್ವಚ್ಛತೆ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದಾರೆಂದು



ಸಾರ್ವಜನಿಕರು ಆಗ್ರಹವಾಗಿದೆ.ಸುಮಾರು ಐದು ಆರು ದಿನಗಳಾದರೂ ನಡುವಮಾವಿನಹಳ್ಳಿ ಗ್ರಾಮದಲ್ಲಿ ಕುಡಿಯಲು ನೀರಿಲ್ಲವಂತೆ ಆದರೂ ಸಹ ಪಿಡಿಓ ಲತಾಬಾಯಿಯವರು ತಿರುಗಿ ಸಹ ನೋಡಿಲ್ಲವಂತೆ ಹೀಗಾದರೆ ಸಾರ್ವಜನಿಕರ ಮೂಲಭೂತ ಸೌಕರ್ಯಗಳ ಗತಿ ಏನು?ಎಂದು ಗ್ರಾಮ ಪಂಚಾಯತಿ ಸದಸ್ಯರಾದ ನಾಗರಾಜ್ ಗೌಡ್ರು ಮೈದೂರ್ ರೇವಣ್ಣ ಹರಕನಾಳು ರೇವಣಸಿದ್ದಪ್ಪ ನಮ್ಮ ಪತ್ರಿಕೆಯೊಂದಿಗೆ ತಿಳಿಸಿದರು.

ಜನರ ಕಷ್ಟಕ್ಕೆ ತಕ್ಷಣವೇ ಸ್ಪಂದಿಸುವ ಶಾಸಕರಾದ ಶ್ರೀನಿವಾಸ್ ಎನ್ ಟಿ ಹಾಗೂ ರವಿಕುಮಾರ್ ಕಾರ್ಯ ನಿರ್ವಾಹಕ ಅಧಿಕಾರಿಗಳು ಕೊಟ್ಟೂರು ಇಂಥಹ ಗ್ರಾಮ ಪಂಚಾಯತಿಯ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ಬಗ್ಗೆ ಎಚ್ಚರ ವಹಿಸಬೇಕೆಂದು ನಮ್ಮ ಪತ್ರಿಕೆಯ ಆಶಯವಾಗಿದೆ.

**ತಾಲೂಕ ವರದಿಗಾರರು :**
**ಪ್ರದೀಪ್.ಕುಮಾರ್.ಸಿ ಕೊಟ್ಟೂರು**

## ಹಂದಿ ಜ್ವರ ಹಂದಿ ಕಾಲರಾ ಅಥವಾ ಹಾಗ್ ಕಾಲರಾ: ಡಾ. ಬಿ.ಎಚ್.ಕನ್ನೂರ

ಇಂಡಿ : ಇಂಡಿ ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಠಿಕಾಣಿ ಹೂಡಿರುವ ಹಂದಿಗಳಲ್ಲಿ ಹಂದಿ ಕಾಲರಾ ಅಥವಾ ಹಾಗ್ ಕಾಲರಾ ಕಾಣಿಸಿ ಕೊಂಡಿದ್ದು, ಇದು ಮಾರಣಾಂತಿಕ ವೈರಸ್ ಕಾಯಿಲೆ ಯಾಗಿದೆ. ಇದರಿಂದ ಪಟ್ಟಣದಲ್ಲಿ ಅಲ್ಲಲ್ಲಿ ಹಂದಿಗಳು ಸಾವನ್ನಪ್ಪುತ್ತಿವೆ. ಕಾರಣ ಹಂದಿ ಸಾಕಾಣಿಕೆದಾರರು ತಮ್ಮ ಹಂದಿ ಗಳನ್ನು ಪಟ್ಟಣದಲ್ಲಿ ಬಿಡಬಾರದು ಎಂದು ಪಶುಪಾಲನಾ ಇಲಾಖೆ ಯ ಸಹಾಯಕ ನಿರ್ದೇಶಕ ಡಾ. ಬಿ.ಎಚ್.ಕನ್ನೂರ ತಿಳಿಸಿದ್ದಾರೆ.



ಹಂದಿ ಸಾಕಾಣಿಕೆದಾರರು ತಮ್ಮ ಹಂದಿಗಳನ್ನು ಒಂದೆಡೆ ಸೇರಿಸಿ ಸಾಕಾಣಿಕೆ ಮಾಡಬೇಕು. ಮತ್ತು ಹಂದಿ ಕಾಲರಾ ವೈರಸ್ ಗೆ ಔಷಧಿಗಳಿವೆ. ಅವುಗಳನ್ನು ಸಂಗ್ರಹಿಸಿ ವೈರಸ್ ನಿಂದ ಬಳಲುತ್ತಿರುವ ಹಂದಿಗಳಿಗೆ ನೀಡಿ ರೋಗ ನಿಯಂತ್ರಿಸಬೇಕು.

ಇಂಡಿ ಪಟ್ಟಣದಲ್ಲಿರುವ ಸಹಾಯಕ ನಿರ್ದೇಶಕ ಪಶುಪಾಲನಾ ಇಲಾಖೆಗೆ ಭೇಟಿ ನೀಡಿ ಈ ಕೂಡಲೇ ಉಚಿತವಾಗಿ ಸಿಗುವ ಔಷಧಿಗಳನ್ನು ತೆಗೆದು ಕೊಂಡು ಹೋಗಿ ಜ್ವರ, ಕೆಂಪು ಮತ್ತು ಬರಿದಾಗುತ್ತಿರುವ ಕಣ್ಣು, ವಾಂತಿ, ಮಲಬದ್ದತೆ, ಅತಿಸಾರ, ಕೆಮ್ಮುವದು, ಉಸಿರಾಟದ ತೊಂದರೆ ಚರ್ಮದಲ್ಲಿ ದದ್ದು ಬೆಳೆಯುತ್ತಿರುವದು ಮುಂತಾದ ರೋಗ ಲಕ್ಷಣಗಳಿರುವ ಹಂದಿಗಳಿಗೆ ಔಷಧಿ ಹಾಕಬೇಕು ಎಂದು ಸಲಹೆ ನೀಡಿದ್ದಾರೆ.

ಹಂದಿ ಕಾಲರಾದಿಂದ ಜನಸಾಮಾನ್ಯರು ಅಂಜುವ ಕಾರಣವಿಲ್ಲ. ಇದು ಕೇವಲ ಹಂದಿಗಳಿಗೆ ಮಾತ್ರ ಹರಡುವ ವೈರಸ್ ಆಗಿದ್ದು, ಮನುಷ್ಯರಿಗೆ ಯಾವುದೇ ಅಪಾಯವಿಲ್ಲ. ಪಟ್ಟಣದಲ್ಲಿ ಎಲ್ಲಿಯಾದರೂ ಹಂದಿಗಳು ಸತ್ತು ಬಿದ್ದಿದ್ದರೆ ಕೂಡಲೇ ಪುರಸಭೆಯ ಸಿಬ್ಬಂದಿಗಳಿಗೆ ಮಾಹಿತಿ ನೀಡಬೇಕು. ಸತ್ತು ಬಿದ್ದಿರುವ ಹಂದಿಗಳನ್ನು ಕೂಡಲೇ ಸಾಗಿಸುವ ವ್ಯವಸ್ಥೆ ಮಾಡಬೇಕೆಂದು ಅವರು ಸಲಹೆ ನೀಡಿದ್ದಾರೆ.

**ತಾಲೂಕ ವರದಿಗಾರರು:**
**ಶಿವಪ್ಪ.ಬಿ.ಹರಿಜನ.ಇಂಡಿ**

## ಡಾ. ಶ್ರೀ ಧೂಪಂ ಅಂಜಿನಪ್ಪ ಮಹಾ ಸ್ವಾಮಿಗಳ 2ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮ

ಯಾರ್ರಗುಂಡ್ಲಹಟ್ಟಿ : ಕೂಡ್ಲಿಗಿ ತಾಲೂಕಿನ ಗುಡೆಕೋಟೆ ಹೋಬಳಿ ವ್ಯಾಪ್ತಿಯ ಯರ್ರಗುಂಡ್ಲಹಟ್ಟಿ ಶ್ರೀ ಆರೂಢ ಪರಮಾನಂದ ಆಶ್ರಮದಲ್ಲಿ ಲಿಂಗೈಕ್ಯ ಗಾನಯೋಗಿ ಪರಮ ಪೂಜ್ಯ ಡಾ. ಶ್ರೀ ಶ್ರೀ ಶ್ರೀ ಧೂಪಂ ಅಂಜಿನಪ್ಪ ಮಹಾ ಸ್ವಾಮಿಗಳ 2ನೇ ವರ್ಷದ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮಲ್ಲಿ ಶ್ರೀಗಳಿಗೆ ನುಡಿ ನಮನ ಶ್ರದ್ಧಾಂಜಲಿ ಸಲ್ಲಿಸಿದರು. ಈ ವೇಳೆ ಮಠದ ಪೀಠಾಧಿಪತಿ ಗಳಾದ ಪರಮಾ ನಂದರೂಢ ಮಹಾ ಸ್ವಾಮಿ ಮಾತಾನಾಡಿ ನಮ್ಮನ್ನು ಆಗಲಿದ ಶ್ರೀಗಳು ಇಂದಿಗೆ 2 ವರ್ಷ ಆಯಿತು ಅವರ ದೇಹ ದೂರವಾದರು ಅವರ ಆತ್ಮ ನಮಲ್ಲಿಯೇ ಬಿಟ್ಟು ಹೋಗಿದ್ದಾರೆ. ಸಂಗೀತ ಕೀರ್ತನೆ ಯಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟದ್ದರು ಅಲೆಮಾರಿ ಜನಾಂಗದಲ್ಲಿ ಹುಟ್ಟಿದ ಶ್ರೀಗಳು ಎಲ್ಲಾ ಜಾತಿ ಧರ್ಮ ಗಳನ್ನು ಪ್ರೀತಿ ಮಾಡುತ್ತಿದ್ದರು. ಸದಾ ಯಾವುದೇ ಆಡಂಬರ ವಿಲ್ಲದೆ ಯಾವುದೇ ಪ್ರಚಾರವನ್ನು ಬಯಸದೆ ಸದಾ ಶಾಂತ ಚಿತ್ತರಾಗಿ ಇರುತ್ತಿದ್ದರು. ಆಧ್ಯಾತ್ಮ ಜ್ಞಾನದಿಂದ ನಾಡಿನಾದ್ಯಂತ ಸಂಚರಿಸಿ ಜನರಲ್ಲಿ ಅರಿವು ಮೂಡಿಸಲು ಕಾರ್ಯ



ಮಾಡಿದರು ಎಂದು ಸ್ಮರಿಸಿದರು. ಈ ಸಂದರ್ಭದಲ್ಲಿ ಗಂಡ ಬೊಮ್ಮನಹಳ್ಳಿ ಗ್ರಾ.ಪಂ. ಉಪಾಧ್ಯಕ್ಷ ಆರ್.ಬಸವರಾಜ್, ಗ್ರಾಮದ ಹಿರಿಯ ಮುಖಂಡರಾದ ಬಿ.ಚಿನ್ನಯ್ಯ, ಚಿತ್ರದುರ್ಗ ಜಿಲ್ಲಾ ಎಸಿ ಎಸ್ಟಿ ಅಲೆಮಾರಿ ಅಭಿವೃದ್ಧಿ ನಿಗಮದ ನಾಮ ನಿರ್ದೇಶನ ಸದಸ್ಯ ಬಿಎಸ್. ಮಂಜಣ್ಣ, ಸಮುದಾಯದ ಮುಖಂಡರು, ಭಕ್ತಾಧಿಗಳು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು:**
**ಕೆ.ಎಸ್.ವೀರೇಶ್.ಕಾನಾ**

## ಮಕ್ಕಳಲ್ಲಿ ಪಠ್ಯ ಪುಸ್ತಕದ ಜ್ಞಾನದ ಜೊತೆಗೆ ವ್ಯವಹಾರ ಜ್ಞಾನವು ಕೂಡ ಬಹಳ ಮುಖ್ಯ

ರಬಕವಿ-ಬನಹಟ್ಟಿ : ಮಕ್ಕಳಲ್ಲಿ ಪಠ್ಯ ಪುಸ್ತಕದ ಜ್ಞಾನದ ಜೊತೆಗೆ ವ್ಯವಹಾರ ಜ್ಞಾನವು ಕೂಡ ಬಹಳ ಮುಖ್ಯ. ಸಂತೆ ಮೇಳ ಮಕ್ಕಳಲ್ಲಿ ಮಾರುಕಟ್ಟೆ ಜ್ಞಾನ, ಹಣಕಾಸು ಜ್ಞಾನ, ವ್ಯವಹಾರ ಜ್ಞಾನ ಬೆಳೆಸಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಶಿಕ್ಷಣ ಸಂಯೋಜಕ ಶ್ರೀಶೈಲ ಬುರ್ಲಿ ಅಭಿಪ್ರಾಯ ಪಟ್ಟರು.

ಅವರು ಸಮೀಪದ ಹೊಸೂರಿನ ಶ್ರೀ ಸಿದ್ಧಾರೂಢ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಮಕ್ಕಳ ಸಂತೆ ಮೇಳವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಲಿಕೆ ಯಶಸ್ವಿಯಾಗಲು ಚಟುವಟಿಕೆಗಳು ಪೂರಕ. ಸಂತೆ ಸಮಯ ಕಲಿಕೆಯಿಂದ ಕೌಶಲ್ಯ, ಜ್ಞಾನ ಬೆಳೆದು ಮಕ್ಕಳ ಸಮಗ್ರ ವ್ಯಕ್ತಿತ್ವ ವಿಕಾಸವಾಗಲು ಸಹಕಾರಿಯಾಗಿದೆ. ಇಂಥ ಚಟುವಟಿಕೆಗಳನ್ನು ಮತ್ತಷ್ಟು ಕೈಗೊಳ್ಳುವ ಮೂಲಕ ಮಕ್ಕಳ ಪ್ರಗತಿಗೆ ಶಿಕ್ಷಕರು ನಿರಂತರ ಪ್ರಯತ್ನ ಮಾಡಬೇಕು ಎಂದು ಕರೆ ಕೊಟ್ಟರು.



ಸಾನಿಧ್ಯ ವಹಿಸಿದ್ದ ಪರಮಾನಂದ ಸ್ವಾಮೀಜಿ ಮಾತನಾಡಿ ಬರೀ ಪುಸ್ತಕೀಯ ಜ್ಞಾನ ಬೆಳೆಸಿ ಪುಸ್ತಕದ ಬದನೆಕಾಯಿ ಮಾಡುವುದು ಬೇಡ. ಇಂದಿನ ಮಕ್ಕಳು ಬಹಳ ಕ್ರಿಯಾಶೀಲರು, ಸೃಜನಶೀಲರು. ಜಗತ್ತಿನ ಸವಾಲುಗಳನ್ನು ಎದುರಿಸಲು ಅವರನ್ನು ಸಿದ್ಧಗೊಳಿಸಬೇಕು ಎಂದರು.

ಮಕ್ಕಳು ವಿವಿಧ ಬಗೆಯ ತರಕಾರಿ, ಹಣ್ಣು, ತೆಂಗಿನಕಾಯಿ, ತಿನಿಸುಗಳು, ಪಾಣಿಪುರಿ, ಬಜ್ಜಿ, ಭಡಂಗ, ಮಿಸಳ, ಮಜ್ಜಿಗೆ ಇತ್ಯಾದಿ ಮಾರುತ್ತಿದ್ದದ್ದು ಆಕರ್ಷಕವಾಗಿತ್ತು. ಮಕ್ಕಳು ಗ್ರಾಹಕರನ್ನು ಕೂಗಿ ಕೂಗಿ ಕರೆಯುತ್ತಿದ್ದದ್ದು ವಿಶೇಷವಾಗಿತ್ತು.

ಪಾಲಕರು, ವಿವಿಧ ಶಾಲೆ ಶಿಕ್ಷಕರು, ಸಾರ್ವಜನಿಕರು ಮಕ್ಕಳಿಂದ ವಿವಿಧ ವಸ್ತುಗಳ ಖರೀದಿಯಲ್ಲಿ ತೊಡಗಿದ್ದರು.

ಶಾಲೆಯ ನಿರ್ದೇಶಕರಾದ ಪರಶುರಾಮ್ ಗುಟ್ಲಿ, ಸುರೇಶ ಗಾಯಕವಾಡ, ಜೋತೆಪ್ಪ ನಲ್ಲೂಡಿ, ಶಿಕ್ಷಕರಾದ ಶಿವಾನಂದ, ಮಮತಾ ಬುರ್ಲಿ, ಸರೋಜಿನಿ ಗಿರಿಸಾಗರ, ಲಕ್ಷ್ಮೀ ಸಿಂಧೆ, ಸುಜಾತಾ ಹಳ್ಳೂರ, ನೀತಾ , ಗಾಯತ್ರಿ, ಪದ್ಮಾ ಕುಂಬಾರ, ಯಶೋದಾ, ಶೈಲಾ ಮಿರ್ಜಿ ಉಪಸ್ಥಿತರಿದ್ದರು.

## ಶಹಾ ಬಣದ ಬೆನ್ನಿಗೆ ನಿಂತ ಶಾಸಕ ಸಿದ್ದು ಸವದಿ

ರಬಕವಿ-ಬನಹಟ್ಟಿ : ಜಮಖಂಡಿ ಹಾಗು ರಬಕವಿ-ಬನಹಟ್ಟಿ ತಾಲೂಕಿನ ಪ್ರತಿಷ್ಠೆಯ ಹಣಕಾಸು ಸಂಸ್ಥೆಯಾದ ಜಮಖಂಡಿ ಅರ್ಬನ್ ಸಹಕಾರಿ ಬ್ಯಾಂಕಿನ ಚುನಾವಣೆಯ ಕಾವು ದಿನದಿಂದ ದಿನಕ್ಕೆ ಏರುತ್ತಿದ್ದು, ತೇರದಾಳ ಶಾಸಕ ಸಿದ್ದೂ ಸವದಿ ಅವರು ಅರುಣಕುಮಾರ ಶಹಾ ಬಣದ ಪರ ಬ್ಯಾಟಿಂಗ್ ಬೀಸಿದ್ದಾರೆ.



ಬನಹಟ್ಟಿಯ ಭದ್ರನ್ನವರ ಸಮುದಾಯ ಭವನದಲ್ಲಿ ಏರ್ಪಡಿಸಿದ ಶಹಾ ಬಣದ ಬೃಹತ್ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪಾರದರ್ಶಕವಾಗಿ ಬಣದ ಸರ್ವ ಸದಸ್ಯರೂ ಒಮ್ಮತದ ನಿಲುವಿನೊಂದಿಗೆ ಒಬ್ಬೊಬ್ಬರ ಗೆಲುವಿಗೆ ಶ್ರಮಿಸದೇ ಇಡೀ ಬಣದ ಗೆಲುವಿಗೆ ಪಣ ತೊಡಬೇಕೆಂದು ಸವದಿ ಹೇಳಿದರು.

ಅರುಣಕುಮಾರ ಶಹಾ ಮಾತನಾಡಿ, ಜಮಖಂಡಿಯಷ್ಟೇ ಪ್ರತಿಷ್ಠೆಯಾಗಿ ರಬಕವಿ-ಬನಹಟ್ಟಿ ತಾಲೂಕಿನಲ್ಲಿ ಶೇರುದಾರರಿದ್ದು, ಈ ಭಾಗದ ಜನತೆಗೆ ಮೋಸವೆಸಗದಂತೆ ಪ್ರಾಮಾಣಿಕವಾಗಿ ಚುನಾವಣೆ ನಡೆಸುವ ಮೂಲಕ ಬನಹಟ್ಟಿಯಿಂದ ಕಣಕ್ಕಿಳಿದಿರುವ ಸುರೇಶ ಚಿಂಡಕ ಅವರನ್ನೊಳಗೊಂಡು ಇಡೀ ಬಣದ ಗೆಲುವಿಗೆ ಶೇರುದಾರರು ಆಶೀರ್ವದಿಸಲಿದ್ದಾರೆ. ನೇಕಾರ ಸಮುದಾಯಕ್ಕೆ ಈಗಾಗಲೇ ಕಳೆದ ಏಳು ದಶಕಗಳಿಂದ ಬ್ಯಾಂಕ್ ಸದೃಢವಾಗಿ ಕಾರ್ಯನಿರ್ವಹಿಸುತ್ತಿದ್ದು , ಸುಮಾರು ಎರಡು ದಶಕಗಳಿಂದಲೂ ನಾನು ಈ ಸಂಸ್ಥೆಯಲ್ಲಿ ನಿರ್ದೇಶಕ, ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ್ದು, ಮತ್ತೊಮ್ಮೆ ಶೇರುದಾರರು ಆಶೀರ್ವದಿಸಲಿದ್ದಾರೆಂದರು.

ಶಂಕರ ಜುಂಜಪ್ಪನವರ, ಮಹಾವೀರ ದಾನಿಗೊಂಡ, ಸತೀಶ ಹಜಾರೆ, ಶ್ರೀಶೈಲ ದಭಾಡಿ, ಮಲ್ಲಿಕಾರ್ಜುನ ತುಂಗಳ, ಡಾ. ಪದ್ಮಜೀತ ನಾಡಗೌಡ ಪಾಟೀಲ, ಸಿದ್ದನಗೌಡ ಪಾಟೀಲ, ದುಂಡಪ್ಪ ಮಾಚಕನೂರ, ಬಸವರಾಜ ಜಾಡಗೌಡ, ರಾಮಣ್ಣ ಹುಲಕುಂದ, ಮಲ್ಲಿನಾಥ ಕಕಮರಿ, ಸುರೇಶ ಚಿಂಡಕ, ಬಸವರಾಜ ಭದ್ರನ್ನವರ, ನೀಲಕಂಠ ಮುತ್ತೂರ, ಧರೆಪ್ಪ ಉಳ್ಳಾಗಡ್ಡಿ, ಶಂಕರ ಜಾಲಿಗಿಡದ, ಬಿ. ಆರ್. ಡಾಗಾ, ಬಸಪ್ರಭು ಹಟ್ಟಿ, ಗಂಗಪ್ಪ ಮುಗತಿ, ಬುಜರೂಕ, ಮಹಾಲಿಂಗಪ್ಪ ಕೊಳ್ಳಿಗುಡ್ಡ , ಬಸವರಾಜ ತೆಗ್ಗಿ, ಫಕೀರಸಾಬ ಬಾಗವಾನ, ಧರೆಪ್ಪ ತೇಲಿ, ಅಪ್ಪಾಸಾಬ ಶಿಂಧೆ, ರುದ್ರಯ್ಯ ಕರಡಿ, ಕಾಡು ಮಾಳಿ, ಚನ್ನಪ್ಪ ಬಾಂಗಿ, ಬಸಪ್ಪ ನ್ಯಾಮಗೌಡ, ಪ್ರದೀಪ ಮಹಾಲಿಂಗಪೂರಮಠ, ಅವಿನಾಶ ಆನಿಖಿಂಡಿ, ಅಪ್ಪಾಸಾಬ ಮನಗೂಳಿ, ಮಹಾಲಿಂಗಪ್ಪ ಕೋಳಿಗುಡ್ಡ , ಮಾಮೂನ್ ಪಾರ್ಥನಳ್ಳಿ, ಈರಣ್ಣ ಬಂಡಿಗಣಿ, ವೈಶಾಲಿ ಗೊಂದಿ, ಸರೋಜಿನಿ ತೆಲಬಕ್ಕನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಪದ್ಮಶ್ರೀ ಪ್ರಶಸ್ತಿ ಪಡೆದ ಮೊದಲ ಮಂಗಳಮುಖಿ ಜೋಗುತಿ ಮಂಜಮ್ಮನವರ ಜೀವನ ಚರಿತ್ರೆ

ಬಳ್ಳಾರಿ ಜಿಲ್ಲೆಯ ತಗ್ಗಿನಮಠ ಎಂಬ ಊರಿನಲ್ಲಿ ಜನಿಸಿದ ಮಂಜಮ್ಮ ಕಲಾ ಲೋಕಕ್ಕೆ ಚಿರ ಪರಿಚಿತರು ಹನುಮಂತಯ್ಯ ಮತ್ತು ಜಯಲಕ್ಷ್ಮಿ ದಂಪತಿಯ ಸುಪುತ್ರರಾಗಿ ಜನ್ಮನಾಮ,ಬಿ ಮಂಜುನಾಥ ಶೆಟ್ಟಿ ಪಡೆದು ಕೊಂಡಿದ್ದರು ಎಲ್ಲಾ ಮಕ್ಕಳಂತೆ ಓದು ಆಡು ಕುಣಿತದ ಸಡಗರದ ಬಾಲ್ಯ ಹೊಂದಿದ್ದರು ಆದರೆ ಏಳನೇ ತರಗತಿಯ ವೇಳೆಗೆ ಶರೀರದಲ್ಲಿ, ವಿಚಿತ್ರ ಏರು ಪೇರು ದೇಹದಲ್ಲಿ ದಿಢೀರಾಗಿ ಹೆಣ್ಣಿನ ಲಕ್ಷ್ಣಗಳು, ಗೋಚರಿಸಿದಾಗ, ಹೆಣ್ಣಾಗಿ ಬದುಕಬೇಕೆಂಬ ಹಂಬಲ ಸಹಜವಾಗಿ ಮೂಡಿದೆ



ಆದರೆ ಲೋಕಕ್ಕೆ ಅಸಹಜವಾದ ಸ್ಥಿತಿ ಹಾಗೂ ಕೌಟುಂಬಿಕ ಸಾಮಾಜಿಕ ಬಹಿಷ್ಕಾರದ ಬರ ಸಿಡಿಲು ಎದುರಿಸ ಬೇಕಾಯಿತು ಆತ್ಮಹತ್ಯೆಗೂ ಯತ್ನಿಸಿಯೂ ಬದುಕಿ ಕೊಂಡ ಮೇಲೆ ಬದುಕು ಭಾವವೆರಡು ಸಮಾಜ ಮುಖಿಯಾಗಲು ದೃಢ ತೀರ್ಮಾನ ಕೈಗೊಳ್ಳುವಂತೆ ಮಾಡಿತು

ಮಂಜುನಾಥ ಶೆಟ್ಟಿ ಮಂಜಮ್ಮಳಾಗಿ, ರೂಪಾಂತರ ಆ ಹಂತದಲ್ಲಿಯೇ ದೊರೆತ ಕಾಳವ್ವ ಜೋಗುತಿಯೇ ಗುರು ತಾಯಿ ಮಾರ್ಗದರ್ಶಕಿ ದಿಕ್ಕು ದೆಸೆ ಎಲ್ಲವೂ 1985,ರಲ್ಲಿ ಹೊಸಪೇಟೆ ತಾಲೂಕಿನ ಹುಲಿಗಿ ಗ್ರಾಮದ ಹುಲಿಗೆಮ್ಮ ದೇಗುಲದಲ್ಲಿ ಜೋಗುತಿಯಾಗಿ ದೀಕ್ಷೆ ಸ್ವೀಕಾರ ಮುಂದೆ ಬದುಕು ಸೇವೆಗೆ ಮುಡಿಪು ಕಾಳವ್ವ ಜೋಗುತಿ ಅವರಿಂದ ಜಾನಪದ ನೃತ್ಯ ಹಾಡುಗಾರಿಕೆ ಮತ್ತು ಇತರೆ ಕಲೆಗಳೆಲ್ಲದರಲ್ಲೂ ತರಬೇತಿ ಕಲಾ ವಿದೆಯಾಗಿ ಬದಲಾದ ಮಂಗಳಮುಖಿ, ತುಮಕೂರಿನಲ್ಲಿ ನಡೆದ ಅಖಿಲ ಕರ್ನಾಟಕ ಮಹಿಳಾ ಜಾನಪದ ಸಮ್ಮೇಳನದಲ್ಲಿ ಕಲಾ ಪ್ರದರ್ಶನ ನೀಡುವುದ ರೊಂದಿಗೆ

ಕಲಾಯಾನಕ್ಕೆ ಮುನ್ನುಡಿ, ಅನಂತರದ್ದು ಕಲೆಯೇ ಸಾಧನ ಪಥ: ಹಲವು ಪಾತ್ರಗಳಲ್ಲಿ ಮಿಂಚಿದ ರಂಗ ಕಲಾವಿದೆ ಶ್ರೀ ರೇಣುಕಾ ಚರಿತ್ರೆ ನಾಟಕದ ಮುಖ್ಯ ಹಾಡುಗಾರ್ತಿ ಗೌಡಶಾನಿ ಕಾಮಧೇನು ಪರಶುರಾಮ ಸೇರಿ7, ಪಾತ್ರಗಳ ನಿರ್ವಹಣೆ ಸಾವಿರಾರು ಕಲಾ ಪ್ರದರ್ಶನದಲ್ಲಿ ಕಲಾ ಪ್ರೇಮಿಗಳ ಹೃನ್ಮಾನ ಸೆಳೆದ ಕಲಾವಂತಿಕೆ ಕಾಳವ್ವ ಜೋಗುತಿಯವರ ಅಗಲಿಕೆಯ ನಂತರ ರೇಣುಕಾ ದೇವಿಯ ಪಾತ್ರದಲ್ಲೂ ಬೆಳಗುವಿಕೆ ಮರಿಯಮ್ಮನಹಳ್ಳಿಯಲ್ಲಿ,ಮಾರುಕಲಾ ರಂಗದ ಬಯಲಾಟಗಳಲ್ಲಿ ನರ್ತಕಿಯಾಗಿ ಜನ ಜನಿತ ಮೋಹಿನಿ ಭಸ್ಮಾಸುರ ಹೇಮರೆಡ್ಡಿ ಮಲ್ಲಮ್ಮ ಮೋಹನ್ ಲಾಲ್ ಮುಂತಾದ ಪಾತ್ರಗಳಲ್ಲಿ ಮಿಂಚಿದ ರಂಗ ಕಲಾವಿದೆ,ವಾದ್ಯಗಾರ್ತಿಯಾಗಿಯೂ, ಮೋಡಿ ಮಾಡಿದ ಕಲಾ ನೈಪುಣೆ ಹಂಪಿ ಉತ್ಸವ ಬೀದರ್ ಉತ್ಸವ ಜಾನಪದ ಲೋಕೋತ್ಸವ ವಿಶ್ವ ಗೋ ಸಮ್ಮೇಳನ ಜಾನಪದ ಜಾತ್ರೆ ಮುಂತಾದ ನಾಡಿನೆಲ್ಲಾ ಪ್ರಮುಖ ಉತ್ಸವಗಳಲ್ಲಿ ಹಾಗೂ ನಾಡಿ ನಾಚೆಯ ಸಾಂಸ್ಕೃತಿಕ ಉತ್ಸವಗಳಲ್ಲೂ ಕಲಾ ಪ್ರದರ್ಶನ ಸಾವಿರಾರು ಕಾರ್ಯಕ್ರಮಗಳು ಎಲ್ಲೆಡೆ ಮೆಚ್ಚುಗೆಯ ಕರಡಾತನ ತೃತೀಯ ಲಿಂಗಿಗಳ ಪಾಲಿಗೆ ಸ್ಫೂರ್ತಿಯ ಚೇತನ ಸತತ ನಾಲ್ಕು ದಶಕಗಳಿಂದಲೂ ನಿರಂತರ ಕಲಾ ಸೇವೆಗೈದಿರುವ ಮಂಜಮ್ಮ ಜೋಗುತಿ ಆಶಕ್ತ ಹೆಣ್ಣು ಮಕ್ಕಳು ದಿಕ್ಕೆ ಕಾಣದ ತೃತೀಯ ಲಿಂಗಿಗಳ ಪಾಲಿಗೆ ಸ್ಫೂರ್ತಿಯ ಚೇತನ ವಾಗಿದ್ದು ವಿಶೇಷ ನಿತ್ಯ ಬದುಕಿನ ಹೋರಾಟ ಸಮಾಜದ ಕುಹಕ ಮಾತುಗಳ ಮಧ್ಯೆ ತಮ್ಮದೇ ಪ್ರತ್ಯೇಕ ಅಸ್ತಿತ್ವದ ಅಸ್ಮಿತೆ ಕಂಡುಕೊಂಡು ಮಂಜಮ್ಮ ಅರಳಿನಿಂತ ಬಗೆಯೇ ಬೆರಗಿನ ಕಥನ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಜಾನಪದ ಶ್ರೀ ಪ್ರಶಸ್ತಿ ಜಾನಪದ ಲೋಕ ಪ್ರಶಸ್ತಿ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗಳು ಮತ್ತಿತರ ಗೌರವಗಳೆಲ್ಲವೂ ಕಲೆಯ ಕೈ ಹಿಡಿದು ಗೆದ್ದ ಮಂಜಮ್ಮ ಅವರ ಸೇವೆಗೆ ಸಂದ ಸತ್ಫಲಗಳು, ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯೆಯಾಗಿ ಕಲಾ ಸಂಘಟನೆಗೆ ಕಾಣಿಕೆ ನೀಡಿದ ಮಂಜಮ್ಮ ಜೋಗುತಿ ಪ್ರಸ್ತುತ ಜಾನಪದ ಅಕಾಡೆಮಿಯ ಅಧ್ಯಕ್ಷೆಯಾಗಿ ಜಾನಪದ ಪೋಷಣೆ ಮತ್ತು ರಕ್ಷಣೆ ಕಾರ್ಯದಲ್ಲಿ ತಲ್ಲೀನರು ಛಲ ಪರಿಶ್ರಮ ಬದ್ದತೆಗಳು ಬದುಕನ್ನು ನಳ ನಳಿಸಿ ಗೆಲ್ಲಿಸಿ ಗೌರವಿಸಬಲ್ಲ ದೆಂಬ ಲೋಕ ನುಡಿಗೆ ಮಂಜಮ್ಮ ಜೋಗುತಿ ಅವರ ಈ ಕಲಾ ಪೂರ್ಣ ಬದುಕೇ ತಾಜಾ ಉದಾಹರಣೆ ಗೆ ಮಾತ್ರವಲ್ಲ ಸಾಧನ ಹಂಬಲಿಗರಿಗೆ ಪ್ರೇರಣೆಯೂ ಕೊಡ

**-ಹೆಚ್ ಲಿಂಗಮ್ಮ ಲೇಖಕಿ, ಬಳ್ಳಾರಿ**

## ಕೂಲಿ ಮೊತ್ತ ಬಿಡುಗಡೆಗೆ ಒತ್ತಾಯಿಸಿ ಪತ್ರ ಚಳುವಳಿ

ಹಗರಿಬೊಮ್ಮನಹಳ್ಳಿ : ಹಗರಿಬೊಮ್ಮನಹಳ್ಳಿ ನರೇಗಾ ಕಾರ್ಮಿಕರ ಕೂಲಿ ಮೊತ್ತ(ಹಣ)ವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ತಾಲೂಕಾ ಗ್ರಾಕೂಸ್ ಸಂಘಟನೆಯ ವರು ಕಾರ್ಮಿಕರಿಂದ ಪತ್ರ ಚಳುವಳಿ ನಡೆಸಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಹಾಕುವ ಮೂಲಕ ಒತ್ತಾಯಿಸಿದರು.

ಈ ಕುರಿತು ತಾಲೂಕಾ ಗ್ರಾಕೂಸ್ ಸಂಚಾಲಕಿ ಎಂ.ಬಿ. ಕೊಟ್ರಮ್ಮ ಮಾತನಾಡಿ, ಕಳೆದ ಎರಡು ತಿಂಗಳಿಂದ ಕೂಲಿ ಕಾರ್ಮಿಕರು ಕೆಲಸ ಮಾಡಿರುವ ವೇತನ ನೀಡುವಲ್ಲಿ ವಿಳಂಬವಾಗಿರುವು ದರಿಂದ ಕಾರ್ಮಿಕರ ಜೀವನ ಕಷ್ಟಕರವಾಗಿದೆ. ಕೂಡಲೇ ಬಾಕಿ ಕೂಲಿ ಮೊತ್ತ(ಹಣ)ವನ್ನು ಬಿಡುಗಡೆ ಗೊಳಿಸಬೇಕು. ಸರ್ಕಾರ ಬರಗಾಲ ಹಿನ್ನೆಲೆಯಲ್ಲಿ ಹೆಚ್ಚುವರಿ 50



ಮಾನವ ದಿನ ನೀಡುತ್ತೇವೆ ಎಂದು, ಈವರೆಗೂ ಯಾವ ಕಾರ್ಮಿಕರಿಗೂ ಹೆಚ್ಚುವರಿ ಮಾನವ ದಿನಗಳನ್ನು ನೀಡದೆ ಕಾರ್ಮಿಕರನ್ನು ನಿರ್ಲಕ್ಷಿಸಿದೆ. ಕೂಡಲೇ ಈ ಎರಡು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆಯುವ ಮೂಲಕ ಒತ್ತಾಯಿಸಲಾಗಿದೆ ಎಂದರು.

ತಾಲೂಕಿನ ಸೊನ್ನ, ಚಿಲಗೋಡು, ಹಂಪಾಪಟ್ಟಣ, ಪಿಲ್ಲೋಬನಹಳ್ಳಿ, ವಲ್ಲಭಾಪುರ, ಕೋಡಿಹಳ್ಳಿ ಸೇರಿ ವಿವಿಧ ಗ್ರಾಮಗಳ ಕೂಲಿ ಕಾರ್ಮಿಕರು 1500.ಕ್ಕೂ ಹೆಚ್ಚು ಪತ್ರಗಳನ್ನು ಹಾಕಿ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿದರು. ಸಂಚಾಲಕಿ ಅಕ್ಕಮಹಾದೇವಿ, ಶಿಲ್ಪಾ ಮಾತನಾಡಿದರು. ಕಾರ್ಮಿಕರಾದ ಚಿಗರಿ ಹನುಮಂತಪ್ಪ, ಕ್ಯಾದಿಗಿಹಳ್ಳಿ ಪಕ್ಕೀರಪ್ಪ, ತಳವಾರ ಗಂಗಪ್ಪ, ದೊಡ್ಡಬಸಪ್ಪ, ಬಾಣದ ವಿರುಪಾಕ್ಷ, ಶೇಖರಪ್ಪ, ದ್ರಾಕ್ಷಾಯಿಣಿ, ಕಲಾವತಿ, ಶಾಂತಮ್ಮ, ಪಾರ್ವತಮ್ಮ, ಹನುಮಕ್ಕ, ಉಮೇಶ, ಕಲಾವತಿ, ಹುಲುಗಪ್ಪ, ಚಂದ್ರಗೌಡ, ಸಿದ್ದಿಂಗಪ್ಪ, ರಮೇಶ, ಶಿವಣ್ಣ ಇತರರಿದ್ದರು.

**ತಾಲೂಕ ವರದಿಗಾರರು:**
**ಮಾಲತೇಶ್.ಶೆಟ್ಟರ್.**
**ಹೊಸಪೇಟೆ**

## 27 ರಂದು ತೆರವಾದ ಸ್ಥಾನಗಳಿಗೆ ಚುನಾವಣೆ

ಬಾಗಲಕೋಟೆ : ಜಿಲ್ಲೆಯ ಬೆಳಗಲಿ ಪಟ್ಟಣ ಪಂಚಾಯತ ಹಾಗೂ ಮಹಾಲಿಂಗಪೂರ ಪುರಸಭೆಯಲ್ಲಿ ವಿವಿಧ ಕಾರಣಗಳಿಂದ ತೆರವಾದ ಸ್ಥಾನಗಳಿಗೆ ಚುನಾವಣೆ ನಡೆಸಲು ವೇಳಾಪಟ್ಟಿ ಹೊರಡಿಸಿದೆ.

ಡಿಸೆಂಬರ 15 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದು, ಡಿ.16 ರಂದು ನಾಮಪತ್ರಗಳ ಪರಿಶೀಲನೆ, ನಾಮಪತ್ರ ಹಿಂಪಡೆಯಲು ಡಿ.18 ಕೊನೆಯ ದಿನವಾಗಿದೆ. ಡಿ.27 ರಂದು ಬೆಳಿಗ್ಗೆ 7 ರಿಂದ ಸಂಜೆ 5 ವರೆಗೆ ಮತದಾನ ನಡೆಸಲಾಗುತ್ತದೆ. ಮರು ಮತದಾನ ಅವಶ್ಯದ್ದಲ್ಲಿ ಡಿ.29 ರಂದು ಮರು ಮತದಾನ ನಡೆಯಲಿದೆ. ಮತ ಏಣಿಕೆ ಡಿ.30 ರಂದು ಬೆಳಿಗ್ಗೆ 8 ರಿಂದ ನಡೆಯಲಿದೆ.

ಮಹಾಲಿಂಗಪುರ ಪುರಸಭೆ ವಾರ್ಡ ನಂ.14 ಮತ್ತು ಬೆಳಗಲಿ ಪಟ್ಟಣ ಪಂಚಾಯತ ವಾರ್ಡ ನಂ6 (ಹಿಂದುಳಿದ ವರ್ಗ (ಎ) ಮೀಸಲಾತಿ ಇರುವುದಾಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

## ಜ.5 ರಂದು ಮಂಗಳೂರಿನಲ್ಲಿ ರಾಜ್ಯ ಕಾನಿಪ ಸಂಘದ ಕಾರ್ಯಕಾರಿ ಸಭೆ

ಬಾಗಲಕೋಟೆ : ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸಭೆ ಜನೇವರಿ 5 ರಂದು ಶುಕ್ರವಾರ 10 ಗಂಟೆಗೆ ಮಂಗಳೂರಿನ ಅಡ್ಯಾರ್ ಸಹ್ಯಾದ್ರಿ ಕಾಲೇಜಜ್ ಆಫ್ ಇಂಜನೀಯರಿಂಗ್ ಸಭಾಂಗಣದಲ್ಲಿ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದು ಸಂಘದ ಪದಾಧಿಕಾರಿಗಳು ಸಭೆಗೆ ಹಾಜರಾಗಬೇಕೆಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಅರ್ಜಿ ಆಹ್ವಾನ

ವಿಜಯಪುರ : ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವತಿಯಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಆರ್.ಅಂಬೇಡ್ಕರ್, ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಗಳಲ್ಲಿ 2024–25ನೇ ಶೈಕ್ಷಣಿಕ ಸಾಲಿಗೆ 6ನೇ ತರಗತಿ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ 2024ರ ಫೆಬ್ರುವರಿ 18ರಂದು ನಡೆಸಲಿರುವ ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ್ರಸ್ತುತ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹತ್ತಿರದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಆರ್.ಅಂಬೇಡ್ಕರ್, ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ ಡಿ.7 ರಿಂದ 31ರವರೆಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸುವ ವಿಧಾನ ಹಾಗೂ ಮಾಹಿತಿ ಪುಸ್ತಕ–2024ನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.inನಲ್ಲಿ ಮತ್ತು ವಸತಿ ಶಿಕ್ಷಣ ಸಂಸ್ಥೆಗಳ ವೆಬ್‌ಸೈಟ್ http://kreis.kar.nic.inನಲ್ಲಿ ಪ್ರಕಟಿಸಲಾಗಿದೆ. ಪ್ರವೇಶ ಪತ್ರವನ್ನು ದಿನಾಂಕ : 01–02–2024ರಂದು ಅರ್ಜಿ ಸಲ್ಲಿಸಿದ ವಸತಿ ಶಾಲೆಯಿಂದ ಪಡೆದುಕೊಳ್ಳಬಹುದಾಗಿದೆ.

ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ವಸತಿ ಶಾಲೆ ಹಾಗೂ ವೆಬ್‌ಸೈಟ್‌ಗಳನ್ನು ಸಂಪರ್ಕಿಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಲಿಗೆ ಬಂದ ಅಂಕಿ ಕಲಿ: ಸಂತಿ ಮಾಡಿ ಲೆಕ್ಕ ಕಲಿ: ವಾಸನ



ಹಳ್ಳೂರ : ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಮಕ್ಕಳ ಸಂತೆಯ ಕಲರವ....* ಮಕ್ಕಳಲ್ಲಿ ವ್ಯವಹಾರಿಕ ಜ್ಞಾನವನ್ನು ವೃದ್ಧಿಸುವುದರ ಜತೆಗೆ, ಅಳತೆ ಮತ್ತು ಪ್ರಮಾಣಗಳ ಅರಿವು, ಬಂಡವಾಳ ಹೂಡಿಕೆ ಮತ್ತು ಲಾಭ, ನಷ್ಟಗಳ ಅರಿವು, ಸಂವಹನ ಕೌಶಲ್ಯದ ವೃದ್ಧಿ, ವಸ್ತುಗಳ ಬೆಲೆ ನಿರ್ಧಾರ ಕೌಶಲ್ಯ, ಒಂದು ಕಾರ್ಯದ ಹಿಂದಿನ ಶ್ರಮವನ್ನು ಅರ್ಥೈಸಿಕೊಳ್ಳುವುದು, ವ್ಯವಹಾರದಲ್ಲಿ ಗಣಿತದ ಮೂಲ ಕ್ರಿಯೆಗಳ ಬಳಕೆ, ನಿತ್ಯ ಜೀವನದಲ್ಲಿ ಗಣಿತ ಬಳಕೆ, ಪ್ಲಾಸ್ಟಿಕ್ ಚೀಲ ಮುಕ್ತ ಸಂತೆಗಳ ನಿರ್ವಹಣೆಯ ಬಗೆ, ಗ್ರಾಹಕ ಮತ್ತು ವ್ಯಾಪಾರಿಗಳ ನಡುವಿನ ಸಂವಹನ ಕೌಶಲ್ಯ ಮತ್ತು ಗ್ರಾಹಕರನ್ನು ಕಾಯ್ದುಕೊಳ್ಳುವ ಕಲೆಯನ್ನು ಕರಗತ ಮಾಡಿಸುವುದಲ್ಲದೇ ಮಕ್ಕಳಲ್ಲಿ ಸ್ವಾವಲಂಬಿ ಭಾವನೆಯನ್ನು ಗಟ್ಟಿಗೊಳಿಸಲು ವೇದಿಕೆಯಾಯಿತು. ಶಾಲೆಯ ಗುರುಗಳು ವಿದ್ಯಾರ್ಥಿಗಳಿದ್ದರು.

## ಸಮರಸದ ಬದುಕು ಮುಖ್ಯ



ರಬಕವಿ–ಬನಹಟ್ಟಿ : ಜೀವನದಲ್ಲಿ ನಾವು ಯಾವ ರೀತಿಯಲ್ಲಿ ಬದುಕಬೇಕೆಂದು ಅರಿವು ಇರಬೇಕು. ನೆರೆ ಹೊರೆಯವರನ್ನು ಪ್ರೀತಿಸುವ ಮಾನವೀಯತೆ ಗುಣ ಅಳವಡಿಸಿಕೊಳ್ಳುವ ಸಾಮರಸ್ಯದ ಬದುಕಿನ ಕಲೆ ಅರಿತುಕೊಳ್ಳಬೇಕೆಂದು ಹಳೇ ಹುಬ್ಬಳ್ಳಿಯ ಸಿದ್ಧಾರೂಢ ಮಠದ ಧರ್ಮಾಧಿಕಾರಿ ಶಾಮನಂದ ಪೂಜಾರಿ ಹೇಳಿದರು.

ನಗರದ ಸಿದ್ಧಾರೂಢ ಮಠದಲ್ಲಿ ಭಕ್ತರನ್ನುದ್ದೇಶಿಸಿ ಮಾತನಾಡಿದ ಅವರು, ಮನುಜ ಕುಲದ ಲಾಭಗಳನ್ನು ವಿವರಿಸಿದ ಅವರು, ಪರಮಪೂಜ್ಯ ನಿಜಗುಣ ಶಿವಯೋಗಿಗಳು 6 ಶಾಸ್ತ್ರಗಳನ್ನು ರಚಿಸಿದರು. ಮಾನವ ಜೀವಿಗೆ ಆಧಾರದ ಸತಂಬವಾಗಿ ಜೀವನ ಪಾವನ ಮಾಡಿಕೊಳ್ಳಲು ಈ ಶಾಸ್ತ್ರಗಳ ಅಧ್ಯಯನ ಮುಖ್ಯವೆಂದರು. ಶ್ರವಣ ಮನನ, ನಿಧಿ, ದಾಸವನ್ನು ಪ್ರತಿಯೊಬ್ಬರು ಮಾಡಬೇಕೆಂದರು. ಕಲ್ಲಪ್ಪ ಪತ್ತಾರ, ರಮೇಶ ಸೊರಗಾಂವಿ ಬಸವರಾಜ ಸುಲ್ತಾನಪುರ, ಶಿವಾನಂದ ಕೊಳಕಿ, ಪ್ರಕಾಶ ಬುರುಡ, ಶಿವಪ್ಪ ಹಕ್ಕಲದಡ್ಡಿ, ರಮೇಶ ಕೊಣ್ಣೂರ, ಮಹಾನಂದಾ ಕುಳ್ಳಿ, ರವಿ ಕೊಣ್ಣೂರ, ಶೈಲಾ ನುಚ್ಚಿ ಸೇರಿದಂತೆ ಅನೇಕರಿದ್ದರು.

## ಮಾನವೀಯ ಮೌಲ್ಯಗಳನ್ನು ಕಟ್ಟುವಂತಹ ಕಥೆ ಕಾದಂಬರಿ ಇಲ್ಲವಾದಲ್ಲಿ ಕಾಲದ ಒಟ್ಟಿಗೆ ಉಳಿಯುವುದಿಲ್ಲ: ಖ್ಯಾತ ಸಾಹಿತಿ ಚಿಕ್ಕಣ್ಣ



ಕಲಾದಗಿ: ಗ್ರಾಮೀಣ ಪ್ರದೇಶದಲ್ಲಿ ಸಾಹಿತ್ಯ ಲೋಕದ ಪ್ರತಿಭೆಗಳು ಇವೆ, ಅವರಿಗೆ ಅವಕಾಶದ ವೇದಿಕೆಯನ್ನು ಕಲ್ಪಿಸಿಕೊಡಬೇಕು, ಕಥೆಗಾರರು ಸ್ಥಳೀಯ ಬಾಷೆ, ತಂತ್ರಗಾರಿಕೆ, ಕುಶಲಗಾರಿಕೆ, ಕಲಾತ್ಮಕ ಚಿಂತೆಗಳು, ಸಾಮಾಜಿಕ ಸಂವೇದನೆ ಹೇಗೆ ನಡೆಯುತ್ತದೆ, ನುಡಿತಾ ಇದೆ ಎಂದು ಕಮ್ಮಟಗಳು ದಾರಿ ಬೆರಳು ತೋರಿಸುತ್ತವೆ, ಅತ್ಯುತ್ತಮ ಕಥೆಗಳನ್ನು ಸಂಗ್ರಹಿಸಿ ಅವುಗಳಿಗೆ ಪುಸ್ತಕ ರೂಪ ಕೊಡುವುದು ದೇಸಿ ಕಥಾ ಕಮ್ಮಟದ ಉದ್ದೇಶ ಆರಂಭದ ರೂಪು ರೇಶಗಳು ಎಂದು ಬೆಂಗಳೂರಿನ ಖ್ಯಾತ ಸಾಹಿತಿ ಕಾ.ತ.ಚಿಕ್ಕಣ್ಣ ಹೇಳಿದರು.

ವೀರಲೋಕ ಪ್ರಕಾಶನ ಬೆಂಗಳೂರು, ಹಣ್ಣು ಬೆಳೆಗಾರರ ವಿದ್ಯಾ ಸಂಸ್ಥೆ ಕಲಾದಗಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಬಾಗಲಕೋಟೆ ಇವರ ಸಹಯೋಗದಲ್ಲಿ ದೇಸಿ ಕಥಾ ಕಮ್ಮಟ–2023 ಬಾಗಲಕೋಟೆ ಕಥಾ ಕಮ್ಮಟ ಶಿಬಿರದ ಉದ್ಘಾಟನೆಯನ್ನು ಕಥೆ ಓದುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಾವು ಯಾಕೆ ಕಥೆ ಬರೆಯಬೇಕು, ಜನರು ನಮ್ಮ ಕಥೆಗಳನ್ನು ಯಾಕೆ ಓದಬೇಕು, ಸಾರ್ಥಕತೆ ಸಾರ್ವತ್ರಿಕತೆ ಅರಿವಾಗಬೇಕು, ಸಮಾಜದ ಸಂಕಟಗಳಿಗೆ ಕಣ್ಣಾಗಿ, ಸೃಜನ ಶೀಲ ಮನಸ್ಸಿನಿಂದಷ್ಟೇ ಅಲ್ಲ ಸಾಮಾಜದಲ್ಲಿ ಮಾನವೀಯ ಮೌಲ್ಯವನ್ನು ಕಟ್ಟುಡುವಂತ ಕಥೆ ಕಾದಂಬರಿ ಇಲ್ಲವಾದಲ್ಲಿ ಕಾಲದ ಒಟ್ಟಿಗೆ ಕಥೆ ಉಳಿಯುವುದಿಲ್ಲ, ಕಾಲದ ಒಟ್ಟಿಗೆ ಬಾಳುವುದಿಲ್ಲ ಸಂಕಟಗಳಿಗೆ ತುಡಿತಗಳಿಗೆ ಮಾತಾಗದೆ ಹೋದರೆ ಅದು ಓದುಗನ ಕಥೆಯಾಗುವುದಿಲ್ಲ, ಕಾಲಗರ್ಭದೊಂದಿಗೆ ಸ್ಪಂಧಿಸುವುದಿಲ್ಲ, ಎಲ್ಲಾ ಕಾಲಕ್ಕೂ ಪ್ರತಿಭೆ ಎನ್ನುವಂತಹದ್ದು ಗುಡಿಸಲಲ್ಲಿ ಹುಟ್ಟುತ್ತೆ, ಬಂಗಲೆಯಲ್ಲಿ ಬೆಳೆಯುತ್ತೆ, ಗ್ರಹಿಕೆಯ ವ್ಯಾಪ್ತಿಯನ್ನು ವೃದ್ದಿಸುವ ಬುದ್ದಿ ಮತ್ತು ಭಾವ ಎರಡೂ ಜೊತೆ ಸೇರಬೇಕು, ಭಾವ ಭಾವನೆ ಹೆಚ್ಚಾಗಿಯೇ ಇರಬೇಕು, ನೀರಿನ ಆಳದಲ್ಲಿ ಬೆಳಕಿನಂತೆ ಭಾವ ಕೆಲಸ ಮಾಡುತ್ತೆ, ಮೌನ ಮತ್ತು ಮಾತಲ್ಲಿ ಗೆಲ್ಲಬೇಕು, ಬದುಕನ್ನು ಬಿಂಬಿಸುವ ಬಾಗೆ ಎಚ್ಚರಿಕೆಯಲ್ಲಿರಬೇಕು, ದೇಸಿ ಪ್ರಜ್ಞೆಯನ್ನು ಪಡೆದುಕೊಳ್ಳಬೇಕು, ಬಾಲ್ಯದ ಅನುಭವ ಮನೋಧರ್ಮ ಜೀವಂತವಾಗಿರಬೇಕು, ಕಥಾಗಾರರಲ್ಲಿ ದೇಸಿ ಪ್ರಜ್ಞೆ ಇರಬೇಕು, ಕಥೆಗಾರರು ಧನಾತ್ಮಕವಾಗಿ ಪ್ರಶ್ನೆ ಮಾಡಿಕೊಂಡು ಬರವಣಿಗೆಯಲ್ಲಿ ಇಳಿಸಬೇಕು ಶ್ರವಣ, ಮನನ ಧ್ಯಾನ ಸರಿಯಾಗಿ ಇದ್ದಲ್ಲಿ ಒಂದು ಕೃತಿ ಹುಟ್ಟುತ್ತದೆ ಎಂದು ಹೇಳಿದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ್ ಸರನಾಯಕ್ ಮಾತನಾಡಿ, ಕಥೆಗಳು ಯಾವಾಗಲೂ ಸಮಾಜದ ಮೇಲೆ ಪರಿಣಾಮ ಬೀರಬೇಕು, ಓದುವವರ ಮೇಲೂ ಪರಿಣಾಮ ಬೀರಬೇಕು, ಯುವ ಕಥೆಗಾರರು ಬರಹಗಾರರು ಕಾದಂಬರಿಗಳು, ಕಥೆಗಳು ಬರಹಗಳು ಸಮಾಜದ ಪ್ರಗತಿ ಉನ್ನತಿ ಪರ ಇರಲಿ, ಮಕ್ಕಳಲ್ಲಿ ಓದುವ ಹವ್ಯಾಸವನ್ನು ಕೂಡಾ ಬೆಳೆಸಬೇಕು ಎಂದರು

ಕಥೆಗಾರರು ಮತ್ತು ಕಥಾ ಕಮ್ಮಟದ ನಿರ್ದೇಶಕ ಮಲ್ಲಿಕಾರ್ಜುನ ಶೆಲ್ಲಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿ ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷದ ಇತಿಹಾಸ ವಿದೆ, ಕಥೆಗಳ ಜನಕ ಮಾಸ್ತಿಯವರು, ಕನ್ನಡದ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದವರು ಸಾಕಷ್ಟು ಸಾಹಿತಿಗಳು, ಕಥೆಗಳಲ್ಲಿ ದೇಶಿಯತೆ ಪ್ರಾದೇಶಿಕತೆ ಇರಿಲಿ ಎನ್ನುವ ಉದ್ದೇಶದಿಂದ ಕಥಾ ಕಮ್ಮಟವನ್ನು ಹಮ್ಮಿಕೊಳ್ಳಲಾಗಿದೆ, ಕಥಾ ಕಮ್ಮಟದ ರೂಪಾರಿಗಳು ಕಾ.ತ.ಚಿಕ್ಕಣ್ಣವರು ಮತ್ತು ಲಕ್ಷ್ಮಣ ಕೊಡಸೆಯವರು, ಬರಹಗಾರರಲ್ಲಿ ಪ್ರಾಂತೀಯತೆ ಪ್ರಾದೇಶಿಕತೆ ಬರಬೇಕು ವಿಶೇಷ ಘಟನೆಗಳನ್ನು ಒಳಗೊಂಡಂತಹ ಕಥೆಗಳು ಬರಲಿ, ಕಥಾ ಕಮ್ಮಟದಿಂದ ಕನ್ನಡಮ್ಮನ ಸೇವೆಗೆ ಇನ್ನಷ್ಟು ಯುವ ಸಾಹಿತಿಗಳ ಉದಯವಾಗಲಿ ಎಂದು ಹೇಳಿದರು.

ಬೆಂಗಳೂರಿನ ಖ್ಯಾತ ಸಾಹಿತಿ ಲಕ್ಷ್ಮಣ ಕೊಡಸೆ ಮಾತನಾಡಿ ಕನ್ನಡದ ಸಾಹಿತ್ಯಕ್ಕೆ 2500 ವರ್ಷಗಳ ಇತಿಹಾಸವಿದೆ, ಮನುಕುಲ ಆರಂಭವಾದಗಿಂದಲೂ ಹೇಳುವ ಸಾಹಿತ್ಯ ಇದೆ, ಕನ್ನಡದ ಕೆಲವು ಸಾಹಿತಿಗಳ ಕುರಿತು ಓದಲೇಬೇಕು, ದಿನಕ್ಕೆ ಸರಾಸರಿ ಕೃತಿಗಳು ಪ್ರಕಟವಾಗುತ್ತೆ, ಬರೆಯುವ ಮುನ್ನ ಸಾದ್ಯವಾದಷ್ಟು ಹೆಚ್ಚು ಓದಿ, ಬರೆದು ನಾಡಿನ ಸಾಂಸ್ಕೃತಿಕ ಸಂಪತ್ತುನ್ನು ಹೆಚ್ಚು ಮಾಡಿ ಎಂದರು.

ಕ.ಸಾ.ಪ ಜಿಲ್ಲಾ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಹ.ಬೆ.ಸಂ. ಉಪಾದ್ಯಕ್ಷ ಎಸ್.ಬಿ.ಅಂಗಡಿ ಮಾತನಾಡಿದರು, ಖ್ಯಾತ ಲೇಖಕ ದ.ರಾ.ಪುರೋಹಿತ, ಹಣ್ಣು ಬೆಳೆಗಾರರ ವಿದ್ಯಾ ಸಂಸ್ಥೆಯ ಅಧ್ಯಕ್ಷ ಕೆ.ಟಿ.ಪಾಟೀಲ, ಎಸ್.ಟಿ.ಪಾಟೀಲ, ವಿ.ಜಿ. ದೇಶಪಾಂಡೆ, ಮಲ್ಲಿಕಾರ್ಜುನ ಮಂಟೂರ, ಆರ್.ವಿ.ಜಾದವ, ಸಂದ್ಯಾ ಹೊನಗುಂಟಿಕರ್, ವಲಯ ಘಟಕ ಅಧ್ಯಕ್ಷ ಲಕ್ಷ್ಮಣ ಅಂಕಲಗಿ, ಆರ್.ಪಿ.ಜೋಶಿ ಇನ್ನಿತರರು ಇದ್ದರು.

## ಮತದಾರರ ನೋಂದಣಿ ಜಾಗೃತಿ ಜಾಥಾ




ಗುಳೇದಗುಡ್ಡ: ಪಟ್ಟಣದ ಸರ್ಕಾರಿ ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜದಲ್ಲಿ ಮತದಾರರ ಸಾಕ್ಷರತಾ ಕ್ಲಬ್ ಅಡಿಯಲ್ಲಿ ಮತದಾರರ ನೋಂದಣಿ ಅಭಿಯಾನ ಜಾಗೃತಿ ಜಾಥಾ ಕಾರ್ಯಕ್ರಮ ಜರುಗಿತು.

ಕಾಲೇಜು ವಿದ್ಯಾರ್ಥಿಗಳು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕೈಯಲ್ಲಿ ನಾಮಫಲಕಗಳನ್ನು ಹಿಡಿದುಕೊಂಡು ಘೋಷಣೆ ಕೂಗಿ ಮತದಾರರ ನೋಂದಣಿಯ ಜಾಗೃತಿ ಮೂಡಿಸಿದರು.

ಕಾಲೇಜಿನ ಪ್ರಾಚಾರ್ಯ ವಿಠ್ಠಲ ಕಳಸಾ ಅವರು ಈ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನೋಡಲ್ ಅಧಿಕಾರಿಗಳಾದ ಎಸ್.ಎಚ್.ಮಡಿವಾಳರ, ಬಿ.ವೈ.ಗೌಡರ, ಎಚ್.ವೈ.ಕುಂದರಗಿ, ಈರಣ್ಣ ದೊಡಮನಿ,

ಶೈಲಾ ಕೊಳ್ಳಿ, ಜೆ.ವಿ.ಯಡವನ್ನವರ, ಎಸ್.ಎಸ್.ಹಿರೇಮಠ ಹಾಗೂ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳೊಂದಿಗೆ ಊರಿನ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಭಾಗಿಯಾದರು.

## ಕಾಶವ್ವ ಚನಬಸಪ್ಪ ಶೀಗಿಹಳ್ಳಿ ನಿಧನ



ಬೆಟಗೇರಿ : ಸಮೀಪದ ಮರಡಿಶಿವಾಪೂರ ಗ್ರಾಮದ ಲಿಂಗಾಯತ ಸಮಾಜದ ಹಿರಿಯರಾದ ಕಾಶವ್ವ ಚನಬಸಪ್ಪ ಶೀಗಿಹಳ್ಳಿ (75) ಇವರು ಮಂಗಳವಾರ ಡಿ.5ರಂದು ನಿಧನರಾದರು. ಮೃತರು ಐದು ಜನ ಪುತ್ರರು, ಮೂರು ಜನ ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಗಿರಿಮಕ್ಕಳು ಸೇರಿದಂತೆ ಅಪಾರ ಬಂದು–ಬಳಗವನ್ನಗಲಿದ್ದಾರೆ.

## ಚಂದ್ರವ್ವ ಶಿರೋಳಮಠ ನಿಧನ



ಮಹಾಲಿಂಗಪುರ : ಪಟ್ಟಣದ ಗಡಾದ ಗಲ್ಲಿ ನಿವಾಸಿ, ಜಂಗಮ ಸಮಾಜದ ಚಂದ್ರವ್ವ ರಾ. ಶಿರೋಳಮಠ (67) ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ವಿವಿಧ ಕೌಶಲ್ಯಗಳಿಂದ ಪ್ರಾದೇಶಿಕ ವಸ್ತುಗಳಲ್ಲಿ ಅಭಿವೃದ್ಧಿ: ದೀಪಾ ಜಿ.



ಬಾಗಲಕೋಟೆ : ವಿವಿಧ ಕೌಶಲ್ಯಗಳಿಂದ ಪ್ರಾದೇಶಿಕ ವಸ್ತುಗಳಲ್ಲಿ ಅಭಿವೃದ್ಧಿ ಸಾಧ್ಯ ಎಂದು ಹುಬ್ಬಳ್ಳಿಯ ದೇಶಪಾಂಡೆ ಸ್ಕಿಲ್ಲಿಂಗ್‌ನ ಬಾಗಲಕೋಟೆಯ ಇಂಪ್ಯಾಕ್ಟ್ ಡಿವಿಜನ್ಯಲ್ ಹೆಡ್ ದೀಪಾ ಜಿ ಹೇಳಿದರು.

ಅವರು ನಗರದ ಬಿ.ವ್ಹಿ.ವ್ಹಿ. ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐ.ಕ್ಯೂ.ಎ.ಸಿ. ಹಾಗೂ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಘಟಕಗಳ ವತಿಯಿಂದ 'ಸ್ಕಿಲ್ ಫಸ್ಟ್, ಜಾಬ್ ನೆಕ್ಸ್ಟ್' ಎಂಬ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಉದ್ಯಮಶೀಲತೆಯ ಕುರಿತು ವಿದ್ಯಾರ್ಥಿನಿಯರಿಗೆ ಪ್ರಾದೇಶಿಕ ವಲಯದಲ್ಲಿ ಸಿಗುವ ವಸ್ತುಗಳನ್ನು ಬಳಸಿಕೊಂಡು ಉದ್ಯಮಗಳನ್ನು ಪ್ರಾರಂಭಿಸುವುದರ ಜೊತೆಗೆ ಅದರಲ್ಲಿ ಯಾವ ಕೌಶಲ್ಯಗಳನ್ನು ಅಳವಡಿಸಿಕೊಂಡು ಅಭಿವೃದ್ಧಿ ಹೊಂದಬೇಕು ಎನ್ನುವುದನ್ನು ವಿದ್ಯಾರ್ಥಿನಿಯರಿಗೆ ತಿಳಿಸಿಕೊಟ್ಟರು.

ಈ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಬಾಗಲಕೋಟೆಯ ಡಿವಿಜನ್ ಲೀಡ್ ಉಮೇಶ್ ಪೂಜಾರಿ, ಸಿ ಕ್ಲಸ್ಟರ್ ಹೆಡ್ ದಿಗಂತ್ ಎಸ್. ಹಾಗೂ ಪ್ರೋಗ್ರಾಮ್ ಅಸೋಸಿಯೇಟ್ ದೇಶಪಾಂಡೆ ಸ್ಕಿಲ್ಲಿಂಗ್ ಹುಬ್ಬಳಿಯ ಕುಮಾರಿ ಅನ್ನಪೂರ್ಣ ಎಂ ಇವರುಗಳು ಉಪಸ್ಥಿತರಿದ್ದು ವಿದ್ಯಾರ್ಥಿನಿಯರಿಗೆ ಕೌಶಲ್ಯಗಳ ಅಳವಡಿಕೆಯ ಬಗ್ಗೆ ಮನ ಮುಟ್ಟುವಂತೆ ಹೇಳಿದರು.

ಅಧ್ಯಕ್ಷತೆ ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀಮತಿ ಎಸ್. ಜೆ. ಒಡೆಯರ್ ಮಾತನಾಡಿ, ತಮ್ಮ ಪದವಿಯ ನಂತರ ಪ್ರತಿಯೊಬ್ಬ ವಿದ್ಯಾರ್ಥಿನಿಯರು ಸ್ವಾವಲಂಬಿ ಜೀವನನಡೆಸಬೇಕಾದರೆ ಗ್ರಾಮೀಣವಲಯದಲ್ಲಿ ಬರುವ ಅನೇಕ ವೃತ್ತಿಗಳಲ್ಲಿ ಹೊಸಹೊಸ ಕೌಶಲ್ಯಗಳನ್ನು ತರುವುದರ ಮೂಲಕ ವೃತ್ತಿ ಬದುಕನ್ನು ಕಟ್ಟಿಕೊಳ್ಳಬೇಕೆಂದರು. ಐ.ಕ್ಯೂ.ಎ.ಸಿ. ಸಂಯೋಜಕರಾದ ಶ್ರೀಮತಿ ಪಿ. ಕೆ. ಚೌಗುಲಾ ಉಪಸ್ಥಿತರಿದ್ದರು, ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ಘಟಕಗಳ ಸಂಯೋಜಕರಾದ ಕು. ಸೀಮಾ ಚೌಮುಸ ಸ್ವಾಗತಿಸಿದರು, ಅಂತಿಮ ವರ್ಷದ ವಿದ್ಯಾರ್ಥಿನಿ ಕು. ದಾನೇಶ್ವರಿ ಹಿರೇಮಠ ವಂದಿಸಿ ನಿರೂಪಿಸಿದರು.

## ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತ ದಾನ ಅತ್ಯಂತ ಶ್ರೇಷ್ಠವಾದ ದಾನ: ಕುಲಕರ್ಣಿ




ಬಾಗಲಕೋಟೆ : ಸಮಾಜದಲ್ಲಿ ರಕ್ತದಾನದ ಬಗ್ಗೆ ಇರುವ ಪ್ರಯೋಜನಗಳ ಬಗ್ಗೆ ತಿಳಿಸಿ, ರಕ್ತದಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿಬೇಕು ರಕ್ತದಾನ ಅತ್ಯಂತ ಶ್ರೇಷ್ಠದಾನಎಂದು ಪ್ರೊ. ಕೇಶವ ಕುಲಕರ್ಣಿ ಹೇಳಿದರು.


ಅವರು ಬಸವೇಶ್ವರ ವಾಣಿಜ್ಯ ಮಹಾ ವಿದ್ಯಾಲಯದ ಸಭಾಭವನದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ, ಆರ್.ಆರ್.ಸಿ ಮತ್ತು ವೈ.ಆರ್.ಸಿ ಘಟಕಗಳ ಮತ್ತು ನಗರ ಅರ್ಬನ್ ರಕ್ತ ಬಂಡಾರದ ಸಹಯೋಗಯಲ್ಲಿ ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡುತ್ತಾ ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳ ಸದುಪಯೋಗಪಡಿಸಿಕೊಂಡು ಜೀವನ್ಮರಣಗಳ ನಡುವೆ ಹೋರಾಡುವ ಜೀವಿಗಳನ್ನು ಉಳಿಸಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಜಗನ್ನಾಥ. ವಿ ಚವ್ಹಾಣ ವಹಿಸಿದ್ದರು. ರಕ್ತದಾನ ಶ್ರೇಷ್ಠದಾನ. ಇಂದು ಸಮಾಜದಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತಿದೆ. ಮನುಷ್ಯನ ದೇಹದಲ್ಲಿಯೇ ತಯಾರಾಗುವುದರಿಂದ ದಾನ ಮಾಡಬಹುದು. ಜೀವನ್ಮರಣದ ನಡುವೆ ಹೋರಾಡುವ ಜೀವಗಳಿಗೆ ರಕ್ತ ನೀಡುವದರ ಮುಖಾಂತರ ಜೀವದಾನ ನೀಡಲು ಸಹಾಯಕಾರಿಯಾಗುವುದೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುಮಾರು 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತ ಪರೀಕ್ಷೆಯಲ್ಲಿ ತೊಡಗಿದ್ದರು. ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಎಸ್ ಘಟಕದ ಅಧಿಕಾರಿಗಳಾದ ಡಾ ಎಂ ಎಂ ಹುದ್ದಾರ, ಪ್ರೊ ಕಿರಣ ಮಲ್ಲಾಪುರ ಹಾಗೂ ವಾಯ್ ಆರ್ ಸಿ ಮತ್ತು ಆರ್ ಆರ್ ಸಿ ಘಟಕದ ಅಧ್ಯಕ್ಷರಾದ ಪ್ರೊ ಸಂಗಮೇಶ ಮೇಟಿ ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನೀನಾಸಂ ನಾಟಕೋತ್ಸವದ ಆಲಯ ಈಲಯ ನಾಟಕ ಪ್ರದರ್ಶನ






ಮೂಡಲಗಿ : ಸಮಾಜದಲ್ಲಿ ಬದಲಾವಣೆಯನ್ನು ತರುವುದಕ್ಕೋಸ್ಕರ ನೀನಾಸಮದಂತಹ ನಾಟಕಗಳು ಅವಶ್ಯವಾಗಿವೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮೂಡಲಗಿ ತಾಲೂಕಿನ ಅಧ್ಯಕ್ಷ ಡಾ. ಸಂಜಯ ಸಿಂದಿಹಟ್ಟಿ ಹೇಳಿದರು

ಕಲ್ಲೋಳಿಯಲ್ಲಿ ಸುವರ್ಣ ಕರ್ನಾಟಕ 50ರ ಸಂಭ್ರಮ ನಿಮಿತ್ಯವಾಗಿ ನೀನಾಸಂ ನಾಟಕೋತ್ಸವದ ಆಲಯ ಈಲಯ ನಾಟಕ ಪ್ರದರ್ಶನಕ್ಕೆ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು,

ಕಲ್ಲೋಳಿ ಪಟ್ಟಣವು ರಾಜಕೀಯ ಕಲೆ ಕ್ರೀಡೆ ಸಾಂಸ್ಕೃತಿಕ ವೈಜ್ಞಾನಿಕ ಐತಿಹಾಸಿಕ ಹಾಗೂ ಪೌರಾಣಿಕ ಪರಂಪರೆಯ ಬೀಡಾಗಿದೆ ಮೂಡಲಗಿ ತಾಲೂಕಿನಲ್ಲಿಯೇ ಈ ಪಟ್ಟಣವು ಹೆಸರುವಾಸಿಯಾಗಿದೆ ಈ ಭಾಗದ ಜನರು ಇಂತಹ ಸಾಧನೆಗಳಿಗೆ ಇಂದು ಮುಂದು ನೋಡದೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಎಂದರು,

ವಿಶೇಷ ಅತಿಥಿಗಳಾಗಿ ಕೆ ಎಲ್ ಇ ಸಂಸ್ಥೆಯ ನಿರ್ದೇಶಕ ರಾಜು ಮುನವಳ್ಳಿ ಹಾಗೂ ಗೋಕಾಕ್ ತಾಲೂಕಿನ ಮಾಜಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹಾಂತೇಶ್ ತಂವಶಿ ಆಗಮಿಸಿದ್ದರು,

ಈ ಸಂದರ್ಭದಲ್ಲಿ ನೀನಾಸಂ ನಾಟಕೋತ್ಸವದ ಮುಖ್ಯಸ್ಥ ಮಂಜುನಾಥ್ ಹಿರೇಮಠ್ ಹಾಗೂ ಅತಿಥಿಗಳಾದ ಡಾ. ಸಂಜಯ್ ಸಿಂದಿಹಟ್ಟಿ, ರಾಜು ಮನವಳ್ಳಿ, ಮಹಾಂತೇಶ ತಾಂವಶಿ ಅವರನ್ನು ಬಸವೇಶ್ವರ ಶಿಕ್ಷಣ ಸಂಸ್ಥೆಯ ಚೇರ್ಮನ್ನ ರಮೇಶ್ ಬೆಳಕೂಡ ಶಾಲು ಹೊದಿಸಿ ಫಲ ಪುಷ್ಪ ನೀಡಿ ಸನ್ಮಾನಿಸಿದರು

ಕಾರ್ಯಕ್ರಮದ ಸಂಘಟನೆಯನ್ನು ಕಲ್ಲೋಳಿಯ ಗಣ್ಯರಾದ ಶಂಕರ್ ಕಡಾಡಿ, ದರೆಪ್ಪ ಖಾನ್ ಗೌಡ್ರು, ಶಿವಪ್ಪ ಬಿ ಪಾಟೀಲ್, ರಾಘವೇಂದ್ರ ಚೌಗಲಾ, ದುರ್ಗಪ್ಪ ಅಕ್ಕಿನವರ, ಜಗದೀಶ್ ಗೊರಗುದ್ದಿ, ಪ್ರಭು ಕಡಾಡಿ,ಸಂದೀಪ್ ಆಡಿನವರ್ ವೇದಿಕೆ ಮೇಲೆ ಉಪಸ್ಥಿತರಿದ್ದರು

ಆರಂಭದಲ್ಲಿ ನಾಡಗೀತೆಯ ನಂತರ ಕನ್ನಡ ಚಿತ್ರರಂಗದ ಶ್ರೇಷ್ಠ ಕಲಾವಿದೆ ಎಚ್ ಲೀಲಾವತಿ ನಿಧನದ ಪ್ರಯುಕ್ತ ಒಂದು ನಿಮಿಷ ಮೌನವನ್ನು ಆಚರಿಸಿ ಕಾರ್ಯಕ್ರಮವನ್ನು ಪ್ರಾರಂಭಗೊಳಿಸಲಾಯಿತು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಂಕರ್ ಬೆಳಕೂಡ ವಹಿಸಿದ್ದರು,

ದುಂಡಯ್ಯ ಕರಗವಿಮಠ ಸ್ವಾಗತಿಸಿದರು ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತ ಅಧಿಕಾರಿ ಪ್ರಕಾಶ್ ಗರಗಟ್ಟಿ ಕಾರ್ಯಕ್ರಮ ನಿರೂಪಿಸಿದರು, ರಮೇಶ್ ಹೆಬ್ಬಾಳ ವಂದಿಸಿದರು

ನೀನಾಸಮ್ ನಾಟಕದ ಮೊದಲನೇ ದಿನ ಹುಲಿಯ ನೆರಳು ಎರಡನೆಯ ದಿನ ಆಲಯ ಈಲೆಯ ಕಲ್ಲೋಳಿ ಪಟ್ಟಣದ ಸುತ್ತಮುತ್ತಲಿ ಗ್ರಾಮಗಳ ಜನರನ್ನು ರಂಜಿಸಿದವು

# ಪರಿಸರ ಜೀವನದ ಉಸಿರು: ಮಣ್ಣೂರ

ಗುಳೇದಗುಡ್ಡ : ಪರಿಸರದ ಹಸಿರು ಜೀವನದ ಉಸಿರಾಗಬೇಕು. ಹಸಿರಿದ್ದರೆ ಸಕಲ ಪ್ರಾಣಿ, ಪಕ್ಷಿ, ಜೀವಕೋಶ ನೆಮ್ಮದಿಯಿಂದ ಬದುಕಲು ಸಾಧ್ಯ. ಹೀಗಾಗಿ ಪರಿಸರ ನಮ್ಮ ಬದುಕಾಗಬೇಕೆಂದು ತೆಗ್ಗಿ ಸರ್ಕಾರಿ ಶಾಲೆಯ ಕನ್ನಡ ಅಧ್ಯಾಪಕ ಮಲ್ಲಿಕಾರ್ಜುನ ಮಣ್ಣೂರ ಹೇಳಿದರು.




ಅವರು ಕರ್ನಾಟಕ ಸುವರ್ಣ ಮಹೋತ್ಸವ ಅಂಗವಾಗಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಹಾಗೂ ತೋಗುಣಸಿ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ನಿಸರ್ಗ ಕವಿ ಕುವೆಂಪು ಅವರ ' ಪಕ್ಷಿಕಾಶಿ ಕವನ ಸಂಕಲನದಲ್ಲಿಯ ಹಸಿರು' ಎಂಬ ವಿಷಯ ಕುರಿತು ಮಾತನಾಡಿ, ಕನ್ನಡ ಸಾಹಿತ್ಯ ಲೋಕವನ್ನು ಕುವೆಂಪು ಶ್ರೀಮಂತಗೊಳಿಸಿದ್ದಾರೆ. ಅವರಂತೆ ಪರಿಸರ ಕಾಪಾಡುವ ಜವಾಬುದಾರಿ ಎಲ್ಲರಿಗೂ ಇರಬೇಕು ಎಂದರು.

ಶಾಲೆಯ ಮುಖ್ಯೋಪಾಧ್ಯಾಯ ಬಸವರಾಜ ಕವಿಶೆಟ್ಟಿ ಅಧ್ಯಕ್ಷತೆವಹಿಸಿ ಮಾತನಾಡಿ, ಪರಿಸರ ನಮ್ಮ ಅವಿಭಾಜ್ಯ ಅಂಗವಾಗಬೇಕು. ಪ್ರತಿಯೊಬ್ಬರೂ ನಮ್ಮ ಸುತ್ತಮುತ್ತಲ ವಾತಾವರಣವನ್ನು ಹಸಿರಾಗಿಡಲು ಸಂಕಲ್ಪ ತೊಡಬೇಕು ಎಂದರು.

ಕಸಾಪ ಜಿಲ್ಲಾ ಕೋಶಾಧ್ಯಕ್ಷ ಡಾ.ಸಿ.ಎಂ.ಜೋಶಿ, ಅತಿಥಿಗಳಾಗಿ ಮಾತನಾಡಿ, ಶಾಲೆ ವಿದ್ಯಾರ್ಥಿಗಳು ಪಠ್ಯದಲ್ಲಿಯ ಕುವೆಂಪು ಅವರ ಪರಿಸರ ಪ್ರೇಮವನ್ನು

ಅರಿತು ಅದರಂತೆ ತಾವೂ ಸಸ್ಯ ಸಂಪತ್ತನ್ನು ಬೆಳೆಸಬೇಕು. ಕವಿ ಆಶಯದಂತೆ ಪ್ರತಿಯೊಬ್ಬರೂ ಪರಿಸರ ಪ್ರೇಮಿಗಳಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ಉಪನ್ಯಾಸ ಮಾಡಿದ ಮಲ್ಲಿಕಾರ್ಜುನ ಮಣ್ಣೂರ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಕಸಾಪ ತಾಲೂಕು ಅಧ್ಯಕ್ಷ ಡಾ.ಎಚ್.ಎಸ್.ಘಂಟಿ, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಡಾ. ಚಂದ್ರಶೇಖರ ಕಾಳನ್ನವರ್, ಬಿ.ಎಚ್.ಕುಲಕರ್ಣಿ, ಆರ್.ಬಿ.ಕಾಟವಾ, ಎಸ್.ವಿ.ತಿಪ್ಪಾ ಇದ್ದರು.

# ಭಗವದ್ಗೀತೆ ಒಂದು ಜ್ಞಾನ ಜ್ಯೋತಿ: ಸ್ವರ್ಣವಲ್ಲೀ ಸ್ವಾಮೀಜಿ

ಹುಕ್ಕೇರಿ : ಭಗವದ್ಗೀತೆ ಒಂದು ಜ್ಞಾನ ಜ್ಯೋತಿ. ಒಂದೊಂದು ಸಾಲು ಕೂಡ ಜ್ಞಾನದ ಒಂದೊಂದು ಕಿಡಿಯನ್ನು ಹೊತ್ತಿಸುತ್ತದೆ ಎಂದು ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಹೇಳಿದರು.

ಭಗವದ್ಗೀತೆಯ ಹಿನ್ನೆಲೆಯಲ್ಲಿ ಹುಕ್ಕೇರಿಯಲ್ಲಿ ಶನಿವಾರ ಸಂಜೆ ಅವರು ಪ್ರವಚನ ನೀಡುತ್ತಿದ್ದರು. ಭಗವದ್ಗೀತೆಯ ಅನುಭವವಾಗಲು ನಾವು ಸಾಕಷ್ಟು ಓದಿರಬೇಕು. ಮನಸ್ಸು ಏನೇನೋ ಲೇಪವನ್ನು ಮೆತ್ತಿಕೊಂಡಿರುತ್ತದೆ. ಆ ಲೇಪವನ್ನು ಕಡಿಮೆ ಮಾಡಿದಾಗ ಜ್ಞಾನದ ಅನುಭವವಾಗುತ್ತದೆ ಎಂದ ಅವರು, ಭಗವದ್ಗೀತೆ ಎಂದರೆ ಭಗವಂತನ ಗೀತೆ ಎಂದರು.



ದಿನಾಲು ಭಗವದ್ಗೀತೆಯ ಒಂದು ಅಧ್ಯಾಯ ಓದಿದರೆ ಮನಸ್ಸಿಗೆ ಖಿನ್ನತೆ ಆವರಿಸುವುದಿಲ್ಲ. ಭಗವದ್ಗೀತೆ ಶ್ರೇಷ್ಠ ಕೃತಿಯಾಗಿದ್ದು, ವಿಶ್ವದಾದ್ಯಂತ ಮಾನ್ಯತೆ ಗಳಿಸಿದೆ. ಭಗವದ್ಗೀತೆ ಎಲ್ಲರ ಮನೆಯಲ್ಲಿರುತ್ತದೆ. ಆದರೆ ಬಹಳಷ್ಟು ಜನರು ಓದಿರುವುದಿಲ್ಲ. ಹಾಗಾಗಿ ಭಗವದ್ಗೀತೆ ಅಭಿಯಾನ ನಡೆಸಲಾಗುತ್ತಿದೆ. ನೂರಾರು ಕೇಂದ್ರಗಳಲ್ಲಿ ಶ್ಲೋಕ ಪಠಣ ನಡೆಯುತ್ತಿದೆ ಎಂದು ಶ್ರೀಗಳು ತಿಳಿಸಿದರು.

ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಸಾನ್ನಿಧ್ಯವಹಿಸಿದ್ದರು. ಸ್ವರ್ಣವಲ್ಲೀ ಶ್ರೀಗಳು ಬಹಳಷ್ಟು ಕಷ್ಟಪಟ್ಟು ಭಗವದ್ಗೀತೆ ಆರಂಭಿಸಿದ್ದಾರೆ. ಇಂದಿಗೂ ಅದನ್ನು ಅದ್ಭುತವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅದಕ್ಕೆ ನಮ್ಮೆಲ್ಲರ ಸಹಕಾರ ಇರಲಿದೆ ಎಂದರು.

ಸ್ವರ್ಣವಲ್ಲೀ ಮಠದಲ್ಲಿ ಜಾತಿ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣಲಾಗುತ್ತದೆ. ಎಲ್ಲರಿಗೂ ಭಗವದ್ಗೀತೆ ಕಲಿಸಿಕೊಡಲಾಗುತ್ತಿದೆ. ಇದೊಂದು ಅಪರೂಪದ ಮಠವಾಗಿದೆ ಎಂದೂ ಹುಕ್ಕೇರಿ ಸ್ವಾಮಿಗಳು ಹೇಳಿದರು.

ಶ್ರೀರಾಮ ಸೇನೆಯ ಮುಖಂಡ ಪ್ರಮೋದ ಮುತಾಲಿಕ, ಭಗವದ್ಗೀತೆಯ ಶ್ರೇಷ್ಠ ವಿಚಾರಧಾರೆಯನ್ನು ಜೀವನದಲ್ಲಿ ಆಚರಣೆಗೆ ತಂದರೆ ಸಾರ್ಥಕತೆ ಇರುತ್ತದೆ. ಏನೇ ಬಂದರೂ ಅದನ್ನು ಎದುರಿಸುವ ಶಕ್ತಿಯನ್ನು ಭಗವದ್ಗೀತೆ ನೀಡುತ್ತದೆ. ಭಗವದ್ಗೀತೆಯಲ್ಲಿ ಪ್ರತಿಯೊಂದಕ್ಕೂ ಪರಿಹಾರವಿದೆ. ಅರ್ಜುನನಿಗೆ ಹೇಳುವ ಈ ಪಾಠ ಇಡೀ ಮನುಕುಲಕ್ಕೇ ಪಾಠವಾಗಿದೆ. ಇಂದಿನ ರಾಷ್ಟ್ರದ ದುಸ್ಥಿತಿಗೆ ಭಗವದ್ಗೀತೆ ಉತ್ತರವಾಗಿದೆ. ಇಂತಹ ಭಗವದ್ಗೀತೆಯನ್ನು ಮನೆ ಮನೆಗೆ ತಲುಪಿಸುವ ಕೆಲಸಕ್ಕಾಗಿ ಸ್ವರ್ಣವಲ್ಲೀ ಶ್ರೀಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಅಭಿನವ ಮಂಜುನಾಥ ಮಹಾರಾಜರು, ರಾಮಣ್ಣ ಬಂತಾಯಿ, ರಾಮಚಂದ್ರ ಜೋಶಿ, ಹನುಮಂತ ಇನಾಮದಾರ, ಸರ್ವೇಶ ಜಕಾತಿ, ಪರಮೇಶ್ವರ ಹೆಗಡೆ, ಸುಬ್ರಹ್ಮಣ್ಯ ಭಟ್, ಅನಿರುದ್ಧ ಜೋಶಿ, ಪ್ರಕಾಶ ಮುತಾಲಿಕ, ತಮ್ಮನಗೌಡ ಪಾಟೀಲ, ವೀರೇಶ ತಾರಳಿ, ಅರವಿಂದ ದೇಶಪಾಂಡೆ, ನಿಂಗಪ್ಪ ಕುಂಬಾರ, ಹರೀಶ ದೊಡ್ಡಲಿಂಗಣ್ಣವರ್, ಗೋವಿಂದ ಮುತಾಲಿಕ, ಧೀರೇಂದ್ರ ಕುಲಕರ್ಣಿ, ಬಾಬು ನಾಯಕ, ಮೊದಲಾದವರು ಇದ್ದರು.

# ಬಡ ಜನರ ಪ್ರೀತಿಗೆ ಪಾತ್ರರಾದ ಮುರಿಗೆಪ್ಪ ಮಾಲಗಾರ ಅವರ ಕಾರ್ಯ ಶ್ಲಾಘನೀಯ

ಹಳ್ಳೂರ : ಬಡವ ಹಿಂದುಳಿದ ವರ್ಗಗಳ ಜನಸೇವೆಯನ್ನ ಜನಾರ್ದನ ಸೇವೆ ಎಂದು ತಿಳಿದೂ ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಬೇಕೆಂದು ಯಾವ ಫಲಾಪೇಕ್ಷೆವಿಲ್ಲದೇ ಜಾತಿ ಬೇಧ ಭಾವ ಮಾಡದೆ ಕಷ್ಟದಲ್ಲಿದ್ದವರ ಮನೆಗೆ ಹೋಗಿ ಪರಿಹಾರ ಹಾಗೂ ಸರಕಾರ ಸೌಲತ್ತುಗಳನ್ನು ಕೊಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ಸಹಸ್ರಾರು ಬಡ ಜನರ ಪ್ರೀತಿಗೆ ಪಾತ್ರರಾದ ಮುರಿಗೆಪ್ಪ ಮಾಲಗಾರ ಅವರ ಕಾರ್ಯ ಶ್ಲಾಘನೀಯವಾದದ್ದು ಎಂದು ಜಂಗಮ ಸಮಾಜದ ಮುಖಂಡರಾದ ಅಯ್ಯಪ್ಪ ಹಿರೇಮಠ ಹೇಳಿದರು.

ಅವರು ಗ್ರಾಮದ ಕಲ್ಮೇಶ್ವರ ದೇವಸ್ಥಾನ ಹತ್ತಿರ ಹಮ್ಮಿಕ್ಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ ಈಗಿನ ಕಾಲದಲ್ಲಿ ಸ್ವಾರ್ಥಿಗಳೆ ಹೆಚ್ಚಾಗಿದ್ದಾರೆ ಅಂತಹದರಲ್ಲಿ ಸಕ್ಕರೆ ಕಾರ್ಖಾನೆಯಲ್ಲಿ ನೌಕರಿ ಮಾಡುತ್ತಾ ನಿರಂತರ ಸಮಾಜ ಸೇವೆ ಮಾಡಿ ಬಡ ಕುಟುಂಬದವರ ಮನೆ ಮಗನಾಗಿ ಒಂಟಿಯಾಗಿ ಹೋರಾಟ ಮಾಡುತ್ತಾ ಸಮಾಜಕ್ಕೆ ನೀಡಿದ ತಕ್ಕ ಪ್ರತೀ ಪಲಕ್ಕೆ ಇತ್ತೀಚಿಗೆ ಜಿಲ್ಲಾಡಳಿತ ವತಿಯಿಂದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿದ್ದು ನಮ್ಮ ಗ್ರಾಮಕ್ಕೆ ತಾಲೂಕಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದರು.



ಸುಭಾಸ ಅಂಗಡಿ.ಹಾಗೂ ಡಾ.ಸಂತೋಷ ಉಪಾದ್ಯೇ ಮಾತನಾಡಿ ಎಲ್ಲ ಸಮಾಜ ಬಾಂಧವರ ಜೊತೆ ಒಳ್ಳೆಯ ಒಡನಾಟವಿಟ್ಟುಕೊಂಡು ಸಮಾಜಕ್ಕೆ ಊರಿಗೆ ಒಳ್ಳೆ ಕೆಲಸ ಕಾರ್ಯ ಮಾಡಿ ಯುವಕರ ಕಣ್ಮನೆ ಯುವನಾಯಕನಂತೆ ಇದ್ದರು ನೋಡುವರ ಕಣ್ಣಿಗೆ ಸಾದಾ ಸೀದಾ ಕಂಡರು ಯಾವ ಅಧಿಕಾರವಿಲ್ಲದಿದ್ದರು ದೊಡ್ಡವರು ಮಾಡುವ ಕೆಲಸ ತಾನು ಮಾಡಿ ಸಮಾಜದಲ್ಲಿ ಗುರುತಿಸಿಕೊಂಡ ರಣಧೀರ ಎಂದು ಹೇಳಿದರು.

ಪ್ರಾರಂಭದಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮುರಿಗೆಪ್ಪ ಮಾಲಗಾರ ಅವರಿಗೆ ಗೆಳೆಯರ ಬಳಗದ ವತಿಯಿಂದ ಸನ್ಮಾನ ನೇರವೇರಿಸಿ ಪುನೀತ್ ರಾಜಕುಮಾರ್ ಅವರ ಭಾವಚಿತ್ರವನ್ನು ನೀಡಿ ಗೌರವಿಸಿದರು. ಈ ಸಮಯದಲ್ಲಿ ಮುಖಂಡರಾದ ಬಾಳಪ್ಪ ಬಾಗೋಡಿ. ಪ್ರಶಾಂತ ಮಠಪತಿ. ಸುಭಾಸ ಅಂಗಡಿ. ನಾಗಯ್ಯ ಮಠಪತಿ.ಕೆಂಪನ್ನ ಅಂಗಡಿ. ಸಿದ್ದು ತೇರದಾಳ.ಗೋವಿಂದ ಪಾಟೀಲ. ಯಾಸಿನ್ ಮುಲ್ತಾನಿ ಸೇರಿದಂತೆ ಅನೇಕರಿದ್ದರು.

# ಲೀಲಾವತಿ ಸರಳತೆಯ ಮಾದರಿ ಕಲಾವಿದೆ

ಗುಳೇದಗುಡ್ಡ : ಲೀಲಾವತಿಯವರು ಬಹುಭಾಷಾ ನಟಿಯಾಗಿ ಚಿತ್ರರಂಗದಲ್ಲಿ ಗುರ್ತಿಸಿಕೊಂಡವರು. ತಮ್ಮ ಜೀವನದಲ್ಲಿ ಬಹಳಷ್ಟು ಏರುಪೇರುಗಳನ್ನು ಕಂಡವರು. ಕನ್ನಡ ಚಿತ್ರರಂಗದಲ್ಲಿ ಸಾಕಷ್ಟು ಸಾಧನೆ ಮಾಡಿದವರು. ಅವರು ಅಭಿನಯದ ಜೊತೆಗೆ ಪರಿಸರ, ಪ್ರಾಣಿ, ಪಕ್ಷಿಗಳ ನಂಟನ್ನು ಬೆಳೆಸಿಕೊಂಡು ಬಂದವರಾಗಿದ್ದರು. ಹೀಗಾಗಿ ಅವರ ಸಮಾಜಮುಖಿ ಸಾದಾ ಸರಳತೆಯ ಜೀವನ ಇತರರಿಗೆ ಮಾದರಿಯಾಗಿದೆ ಎಂದು ಹಿರಿಯ ಸಾಹಿತಿ ಡಾ.ಸಿ.ಎಂ.ಜೋಶಿ ಹೇಳಿದರು.



ಅವರು ಪಟ್ಟಣದ ಪಾಳುಬಿದ್ದ ಕಂದಗಲ್ ಹಣಮಂತರಾಯರ ರಂಗಮಂದಿರದಲ್ಲಿ ಆಯೋಜಿಸಿದ್ದ ಕನ್ನಡದ ಮೇರು ನಟಿ ಲೀಲಾವತಿ ಅಮ್ಮನವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ನಾಗಕನ್ನಿಕೆ ಚಿತ್ರದಲ್ಲಿಯ ಸಖಿಯ ಪಾತ್ರದ ಮೂಲಕ ಕನ್ನಡ ಚಿತ್ರ ರಂಗವನ್ನು ಪ್ರವೇಶಿಸಿದರು. ಮಾಂಗಲ್ಯಯೋಗ ಚಿತ್ರದಿಂದ ಅದ್ಬುತ ನಟಿಯಾಗಿ ಮುಂದೆ ಕನ್ನಡ, ತೆಲುಗು, ತಮಿಳ ಹೀಗೆ 600 ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ತಮ್ಮ ಕಲಾಪ್ರತಿಭೆಯಿಂದ ಜನಪ್ರಿಯತೆಗಳಿಸಿದರು. ಇವರು ಅಭಿನಯಿಸಿದ ಚಿತ್ರಗಳಲ್ಲಿ 400ಕ್ಕೂ ಹೆಚ್ಚು ಕನ್ನಡ ಚಿತ್ರಗಳಿವೆ ಎಂದರು.

ಕಲಾವಿದ ಶ್ರೀಕಾಂತ ಹುನಗುಂದ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಯ ಆರಂಭದಲ್ಲಿ ಲೀಲಾವತಿ ಅಮ್ಮನವರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ ಮೌನಾಚರಣೆ ಮಾಡಲಾಯಿತು. ರಂಗ ನಟಿ, ಗಾಯಕಿ ಜ್ಯೋತಿ ಗುಳೇದಗುಡ್ಡ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಡಾ.ಎಚ್.ಎಸ್.ಘಂಟಿ, ಮಹಾದೇವ ಜಗತಾಪ, ರವಿ ಅಂಗಡಿ, ವಿಷ್ಣು ಬಳಿಗೇರ, ಯಲ್ಲಪ್ಪ ಮನ್ನಿಕಟ್ಟಿ, ಅಕ್ತರ ಅಫಘಾನ ಮತ್ತಿತರರು ಇದ್ದರು.

# ಅಥಣಿ ಜಿಲ್ಲಾ ಹೋರಾಟಕ್ಕೆ ಮಾಳಿ ಸಮಾಜ ಸಂಘಟನೆಗಳಿಂದ ಬೆಂಬಲ

ಅಥಣಿ : ಕಳೆದ ಹತ್ತಾರು ವರ್ಷಗಳಿಂದ ಬೇಡಿಕೆಯಲ್ಲಿ ಇದ್ದ ಅಥಣಿಯನ್ನು ಜಿಲ್ಲೆಯನ್ನಾಗಿ ಮಾಡಬೇಕು ಎಂದು ನಮ್ಮ ಮಾಳಿ ಸಮಾಜದ ಶ್ರೀ ಮಹಾತ್ಮಾ ಜ್ಯೋತಿಬಾ ಫುಲೆ ಸರ್ಕಲ್ ಯುವ ಕಮೀಟಿ ಹಾಗೂ ಮಾಳಿ ಸಮಾಜ ಯುವಕ ಕಮೀಟಿಯ ಎಲ್ಲ ಸದಸ್ಯರು ಸೇರಿಕೊಂಡು ಈ ಮೂಲಕ "ಅಥಣಿ ಜಿಲ್ಲಾ ಹೋರಾಟ ಸಮೀತಿ" ಗೆ ಬೆಂಬಲವನ್ನು ಘೋಷಿಸುತ್ತಿದ್ದೆವೆ ಎಂದು ಅಧ್ಯಕ್ಷ ರವಿ ಭಾಸಿಂಗಿ ಅವರು ಹೇಳಿದರು.



ಅವರು ಸ್ಥಳೀಯ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡ ಪತ್ರಿಕಾಘೋಷ್ಠಿಯಲ್ಲಿ ಮಾತನಾಡಿ ಸದರಿ ಜಿಲ್ಲಾ ಹೋರಾಟ ಸಮೀತಿ ವತಿಯಿಂದ ಜರುಗುವ ಪ್ರತಿಯೊಂದು ಸಭೆ, ಸಮಾರಂಭ, ಪ್ರತಿಭಟನೆ ಇತ್ಯಾದಿ ಸೇರಿ ಎಲ್ಲದರಲ್ಲಿ ನಮ್ಮ ಸಂಘಟನೆಯ ಸರ್ವರೂ ಸೇರಿ ತನು, ಮನ, ಧನದಿಂದ ಭಾಗವಹಿಸುತ್ತೆವೆ ಎಂದರು.

ಅನಂತರ ಸರ್ಕಲ್ ಕಮೀಟಿ ಅಧ್ಯಕ್ಷ ರಮೇಶ ಮಾಳಿ ಮಾತನಾಡಿ ಈ ಹಿಂದೆಯೂ ಕೂಡ ನಮ್ಮ ಸಂಘದಿಂದ ಬೆಂಬಲ ಕೊಟ್ಟಿದ್ದೆವು ಮುಂದೆಯೂ ಕೂಡ ನಾವು ಅವಿರತವಾಗಿ ಬೆಂಬಲ ಸೂಚಿಸಿ ಜೊತೆಗೆ ಇರುತ್ತೆವೆ ಎಂದರು. ಈ ವೇಳೆ ಸುಭಾಶ ಮಾಳಿ, ಮಾದೇವ ಚಮಕೇರಿ, ರವಿ ಬಡಕಂಬಿ, ಅರುಣ ಮಾಳಿ, ಲಕ್ಷ್ಮಣ ಬಡಕಂಬಿ, ಸಂತೋಷ ಬಡಕಂಬಿ, ಮಾಂತೇಶ ಭಾಸಿಂಗಿ, ಬಸು ಅಣ್ಣಾ ಸೇರಿದಂತೆ ಇತರರಿದ್ದರು.

# ಆರೋಗ್ಯ ಸಮಾನತೆಗೆ ಆದ್ಯತೆ ನೀಡುವುದು ಅತ್ಯಗತ್ಯ: ಸಚಿವ ದಿನೇಶ್ ಗುಂಡೂರಾವ್

ಬೆಂಗಳೂರು : ಸಮರ್ಥನಂನ ವಾರ್ಷಿಕ ವಿಶಿಷ್ಟ ಕಾರ್ಯಕ್ರಮವಾದ ಪ್ರತಿ ವರ್ಷ ಡಿಸೆಂಬರ್ 3 ರಂದು ಆಚರಿಸಲಾಗುವ ವಿಶ್ವ ಅಂಗವಿಕಲರ ದಿನದ ಸ್ಮರಣಾರ್ಥವಾಗಿ "ಎಲ್ಲರಿಗೂ ಆರೋಗ್ಯ" ಎಂಬ ವಾಕಥಾನ್ ಅನ್ನು ಇತ್ತೀಚೆಗೆ ಜಯನಗರ 3 ನೇ ಬ್ಲಾಕ್ನಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಆಯೋಜಿಸಿತು.





ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಸಿ.ಕೆ.ರಾಮಮೂರ್ತಿ, ಶಾಸಕ ಜಯನಗರ ಮನೀಶ್ ಮೆನನ್, ಕಥೇರಿ ವ್ಯವಸ್ಥಾಪಕ ಪ್ರಾಂಶುಪಾಲರು, ZS ಅಸೋಸಿಯೇಟ್ಸ್ ಡಾ. ಹ್ಯುಂಗ್ ಮಿನ್ ಕಿಮ್, ಡೆಪ್ಯುಟಿ ಕಾನ್ಸುಲ್ ಜನರಲ್– ಆಸ್ಟ್ರೇಲಿಯನ್ ಕಾನ್ಸುಲೇಟ್ ಜನರಲ್ ಚಂದ್ರು ಅಯ್ಯರ್, ಡೆಪ್ಯುಟಿ ಹೈ ಕಮಿಷನರ್ – ಬ್ರಿಟಿಷ್ ಡೆಪ್ಯುಟಿ ಹೈ ಕಮಿಷನ್ ಬೆಂಗಳೂರು ಪ್ರತಾಪ್ ಸಿಂಗ್ ಖಾಲ್ಸಾ, ಗ್ರೂಪ್ ಪ್ರೋಗ್ರಾಂ ಮ್ಯಾನೇಜರ್, ಅಡೋಬ್, ಸುಬ್ಬು ರಘುನಾಥನ್, ಪೇಪಾಲ್ ನ ಹಿರಿಯ ನಿರ್ದೇಶಕ ಮತ್ತು ಸೈಟ್ ಮುಖ್ಯಸ್ಥ ಆನಂದ್ ಕೈಲಾಶ್, ಕಾರ್ಯನಿರ್ವಾಹಕ ನಿರ್ದೇಶಕ ? ITG, ಡಾ.ಮಹಾಂತೇಶ್ ಜಿ.ಕೆ., ಸ್ಥಾಪಕ ಟ್ರಸ್ಟಿ, ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್, ಅಧ್ಯಕ್ಷ–ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಇನ್ ಇಂಡಿಯಾ (CABI) ಮತ್ತೀತರ ಗಣ್ಯರು ಉಪಸ್ಥಿತರಿದ್ದರು.

ವಾಕಥಾನ್ ಕೇವಲ ಒಂದು ಕೂಟಕ್ಕಿಂತ ಹೆಚ್ಚಾಗಿತ್ತು. ಎಲ್ಲರಿಗೂ ಆರೋಗ್ಯಕರ ಜೀವನಕ್ಕೆ ಒತ್ತು ನೀಡುತ್ತದೆ. ವಿವಿಧ ಉಪಕ್ರಮಗಳ ಮೂಲಕ, 10,000 ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಪೌಷ್ಠಿಕಾಂಶದ ಕಿಟ್ಗಳನ್ನು ವಿತರಿಸುವ ಮೂಲಕ, 5,000 ಹಿಂದುಳಿದ ಹುಡುಗಿಯರಿಗೆ ಮುಟ್ಟಿನ ನೈರ್ಮಲ್ಯವನ್ನು ಬೆಂಬಲಿಸುವ ಮೂಲಕ ಮತ್ತು ದೃಷ್ಟಿಹೀನ ವ್ಯಕ್ತಿಗಳಿಗೆ ಅಗತ್ಯ ತಂತ್ರಜ್ಞಾನವನ್ನು ಒದಗಿಸುವ ಮೂಲಕ ಅಂಚಿನಲ್ಲಿರುವ ಗುಂಪುಗಳನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ.

ಸಚಿವರಾದ ದಿನೇಶ್ ಗುಂಡೂ ರಾವ್ ಅವರು ಮಾತನಾಡುತ್ತಾ, "ಆರೋಗ್ಯವು ಪ್ರತಿಯೊಬ್ಬರಿಗೂ, ವಿಶೇಷವಾಗಿ ಅಂಗವಿಕಲರಿಗೆ ನಿರ್ಣಾಯಕ ಮಹತ್ವವನ್ನು ಹೊಂದಿದೆ.

ಆರೋಗ್ಯ ಸಮಾನತೆಗೆ ಆದ್ಯತೆ ನೀಡುವುದು ಅತ್ಯಗತ್ಯ. ಸಮರ್ಥನಂ ವಾಕಥಾನ್ ಒಂದು ವಾಹನವಾಗಿ ಕಾರ್ಯನಿರ್ವಹಿಸುತ್ತದೆ. ವಿವಿಧ ಸಮುದಾಯಗಳಾದ್ಯಂತ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಲು, ಉತ್ತಮ ಆರೋಗ್ಯದ ಮೂಲಭೂತ ಹಕ್ಕನ್ನು ಒತ್ತಿಹೇಳುತ್ತಿದೆ" ಎಂದರು.

ಡಾ.ಮಹಾಂತೇಶ್ ಜಿ ಕಿವಡಸನ್ನವರ್, ಸಮರ್ಥನಂ ಟ್ರಸ್ಟ್ ಫಾರ್ ಡಿಸೇಬಲ್ ನ ಸಂಸ್ಥಾಪಕ ಟ್ರಸ್ಟಿ ಮಾತನಾಡುತ್ತಾ, "ವರ್ಷದಿಂದ ವರ್ಷಕ್ಕೆ, ವಾಕಥಾನ್ ಹೆಚ್ಚು ಉಲ್ಲಾಸದಾಯಕವಾಗುತ್ತದೆ. ಈ ವರ್ಷದ ಧ್ಯೇಯವಾಕ್ಯ, "ಎಲ್ಲರಿಗೂ ಆರೋಗ್ಯ", ನಮ್ಮ ದೃಷ್ಟಿ ಮತ್ತು ಉದ್ದೇಶಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ, ಪ್ರತಿಯೊಬ್ಬರಿಗೂ ಆರೋಗ್ಯದ ಲಭ್ಯತೆಯ ಪ್ರಮುಖ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. ಇದು ನಮ್ಮ ಜೀವನದಲ್ಲಿ ಫಿಟ್ ಮತ್ತು ಸಕ್ರಿಯವಾಗಿ ಉಳಿಯುವ ಅಗತ್ಯತೆಯನ್ನು ಸೂಚಿಸುತ್ತದೆ. 'ಆರೋಗ್ಯವೇ ಸಂಪತ್ತು' ಎಂಬ ಗಾದೆಯಂತೆ, ಮತ್ತು ನಡಿಗೆಯು ಅದರ ಸಾರದಲ್ಲಿ, ಯೋಗಕ್ಷೇಮದ ಬದ್ಧತೆಯನ್ನು ತಿಳಿಸುತ್ತದೆ" ಎಂದರು.

ಈ ಕಾರ್ಯಕ್ರಮ 10000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಕಾರ್ಪೊರೇಟ್ ಭಾಗವಹಿಸುವಿಕೆಯೊಂದಿಗೆ ಅಗಾಧವಾದ ಮತದಾನಕ್ಕೆ ಸಾಕ್ಷಿಯಾಯಿತು. ವಾಕಥಾನ್ ಆರೋಗ್ಯ ಇಕ್ವಿಟಿ ಮತ್ತು ಅಂತರ್ಗತ ಆರೋಗ್ಯ ರಕ್ಷಣೆ ಅಭ್ಯಾಸಗಳಿಗಾಗಿ ಪ್ರತಿಪಾದಿಸುವಲ್ಲಿ ವೈವಿಧ್ಯಮಯ ಮಧ್ಯಸ್ಥಗಾರರನ್ನು ಒಂದುಗೂಡಿಸಿತು, "ಎಲ್ಲರಿಗೂ ಆರೋಗ್ಯ" ಕಡೆಗೆ ಸಾಮೂಹಿಕ ಬದ್ಧತೆಯನ್ನು ಬೆಳೆಸುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ನಿರಂಜನ್ @ 8073358679 । 9480835965

# ಶಿಕ್ಷಕರು ಮಕ್ಕಳಿಗೆ ಹತ್ತಿರವಾದರೆ ಕಲಿಕೆ ಸುಗಮ



ರಬಕವಿ-ಬನಹಟ್ಟಿ : ನವೀನ ಚಟುವಟಿಕೆಗಳ ಮೂಲಕ ಬೋಧನೆ ಮಾಡಿ ಮಕ್ಕಳ ಕಲಿಕೆ ಸುಗಮ ಮಾಡಬೇಕು. ಜ್ಞಾನದ ಜೊತೆಗೆ ಆತ್ಮವಿಶ್ವಾಸ ಬೆಳೆಸಬೇಕು. ಮಕ್ಕಳೊಂದಿಗೆ ಪ್ರೀತಿಯಿಂದ ಮಾತನಾಡಿ ಹತ್ತಿರವಾದಾಗ ಮಕ್ಕಳು ಆಪ್ತರಾಗಿ ಪರಿಣಾಮಕಾರಿಯಾಗಿ ಕಲಿಯುತ್ತಾರೆ ಎಂದು ರಾಜ್ಯ ಶಾಲಾ ಶಿಕ್ಷಣ ಇಲಾಖೆಯ ಪ್ರಾಥಮಿಕ ವಿಭಾಗದ ನಿರ್ದೇಶಕರಾದ ಪ್ರಸನ್ನಕುಮಾರ ಅಭಿಪ್ರಾಯಪಟ್ಟರು.

ಅವರು ಯಲ್ಲಟ್ಟಿಯ ಕೊಣ್ಣೂರ್ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ನಡೆದ ಜಮಖಂಡಿ ಹಾಗೂ ರಬಕವಿ - ಬನಹಟ್ಟಿ ತಾಲೂಕಿನ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹಾಗೂ ಸಹ ಶಿಕ್ಷಕರ ಪ್ರೇರಣಾ ಶಿಬಿರವನ್ನು ಉದ್ದೇಶಿಸಿ ಮಾತನಾಡಿದರು.

ಎಷ್ಟು ಎತ್ತರವಿದ್ದರೇನು ಹತ್ತಿರವಾಗದಿದ್ದರೆ ಹೇಗೆ ಎನ್ನುವ ಕವಿ ದೇವನೂರು ಮಹಾದೇವ ಅವರ ಕವಿತೆಯ ಸಾಲನ್ನು ನೆನಪಿಸಿದ ಅವರು ಮುಗ್ಧ ಮನಸ್ಸಿನ ಮಕ್ಕಳ ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸುವ ದೃಷ್ಟಿಯಲ್ಲಿ ಶಿಕ್ಷಕರ ಪಾತ್ರ ಬಹಳ ದೊಡ್ಡದು ಎಂದು ಹೇಳಿದರು. ಕಠಿಣ ಪರಿಶ್ರಮ ಮಾಡುವ ಜೊತೆಗೆ ಅದಕ್ಕೆ ಸ್ಮಾರ್ಟ್ ಟಚ್ ನೀಡಿದರೆ ಶಿಕ್ಷಕರ ಬೋಧನೆ ಇನ್ನೂ ಪರಿಣಾಮಕಾರಿಯಾಗುತ್ತದೆ. ಸಾಮಾನ್ಯ ಬೋಧನೆಯೊಂದಿಗೆ ರಸಪ್ರಶ್ನೆ, ವಿದ್ಯಾರ್ಥಿಗಳ ಮನೆ ಭೇಟಿ, ಗುಂಪು ಅಧ್ಯಯನ, ವಿಶೇಷ ತರಗತಿ, ಪಾಲಕರೊಂದಿಗೆ ಸಂಪರ್ಕ, ವಿಷಯ ರೂಢಿಸುವಿಕೆ, ನಿರಂತರ ವಿವಿಧ ರೀತಿಯ ಮೌಲ್ಯಮಾಪನ ಇತ್ಯಾದಿಗಳು ವಿದ್ಯಾರ್ಥಿಗಳಲ್ಲಿ ಕೌಶಲ್ಯ, ಸೃಜನಶೀಲತೆ, ಆತ್ಮವಿಶ್ವಾಸ ಬೆಳೆಸುತ್ತವೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಮಖಂಡಿಯ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಈಶ್ವರ ನಾಯಕ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಉತ್ತೀರ್ಣವಾಗುವುದು ಮುಖ್ಯ ಅಲ್ಲ. ಗುಣಮಟ್ಟದ ಉತ್ತೀರ್ಣತೆ ಮುಖ್ಯ. ಪುನರಾವರ್ತನೆ ಮಾಡುವುದರಿಂದ ಮಕ್ಕಳಿಗೆ ವಿಷಯ ಮನನವಾಗಿ ಫಲಿತಾಂಶ ಹೆಚ್ಚಾಗುವುದರಲ್ಲಿ ಎರಡು ಮಾತಿಲ್ಲ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಎ. ಕೆ. ಬಸಣ್ಣವರ, ಎಸ್. ಎಸ್. ಎಲ್. ಸಿ. ಫಲಿತಾಂಶ ಉತ್ತಮಗೊಳಿಸಲು ತಾಲೂಕಿನಲ್ಲಿ ನಾನೂ ಪಾಸಾಗುವೆ, ಪರಸ್ಪರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ, ಪರೀಕ್ಷೆ ಒಂದು ಹಬ್ಬ ಸಂಭ್ರಮಿಸಿ ಕಾರ್ಯಕ್ರಮ, ಶೈಕ್ಷಣಿಕ ಮೌಲ್ಯಮಾಪನ, ಥಿಂಕ್ ಬಿಗ್ ಔಟ್ 100 ಪರ್ಸೆಂಟ್ ಇತ್ಯಾದಿಗಳ ಮೂಲಕ ಪ್ರಯತ್ನಿಸಲಾಗುತ್ತಿದ್ದು , ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸ್ಪಂದನೆ ಉತ್ತಮವಾಗಿದೆ ಎಂದರು.

ಕೊಣ್ಣೂರ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಪ್ರಾಚಾರ್ಯ ಬಸವರಾಜ ಕೊಣ್ಣೂರ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಬಹಳಷ್ಟು ಬುದ್ಧಿವಂತರು. ನಾವಿನ್ಯಯುತ ಪ್ರಯೋಗಗಳ ಮೂಲಕ ಅವರಲ್ಲಿ ಇರುವ ಜ್ಞಾನ, ಕೌಶಲ್ಯ, ಕ್ರಿಯಾಶೀಲತೆಯನ್ನು ವೃದ್ಧಿಸುವ ಕಾರ್ಯ ಮಾಡಬೇಕು ಎಂದು ಕರೆ ಕೊಟ್ಟರು. ರಬಕವಿ-ಬನಹಟ್ಟಿ ಹಾಗೂ ಜಮಖಂಡಿ ತಾಲೂಕಿನ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರು, ಎಲ್ಲ ಶಾಲೆಗಳ ಇಂಗ್ಲಿಷ್ ಹಾಗೂ ಕೋರ್ ವಿಷಯಗಳ ಶಿಕ್ಷಕರು ಸಭೆಯಲ್ಲಿ ಭಾಗವಹಿಸಿ ಪ್ರೇರಣೆ ಪಡೆದರು.

ಎಸ್. ಎಸ್. ಎಲ್. ಸಿ. ನೋಡಲ್ ಅಧಿಕಾರಿ ಶ್ರೀಶೈಲ ಬುರ್ಲಿ ಸ್ವಾಗತಿಸಿ ನಿರೂಪಿಸಿದರು. ಕ್ಷೇತ್ರ ಸಮನ್ವಯ ಅಧಿಕಾರಿ ರಮೇಶ ಅವಟಿ ವಂದಿಸಿದರು.

# ಜೆವಿ ಮಂಡಳದಲ್ಲಿ ಅಪರಾಧ ತಡೆ ಮಾಸಾಚರಣೆ

## ವಿದ್ಯಾರ್ಥಿಗಳು ಕಾನೂನು ಪಾಲಿಸಿ, ಗೌರವಿಸಿ-ಪಿಎಸ್ಐ



ತೇರದಾಳ : ದೇಶದ ಯುವಶಕ್ತಿ ಎಂದೇ ಬಿಂಬಿತಗೊಂಡಿರುವ ಯುವಕರು ಕಾನೂನು ಪಾಲಿಸುವುದರ ಜತೆಗೆ ಅದನ್ನು ಗೌರವಿಸಬೇಕೆಂದು ಇಲ್ಲಿನ ಠಾಣಾಧಿಕಾರಿ ಅಪ್ಪು ಐಗಳಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅಪರಾಧ ತಡೆ ಮಾಸಾಚರಣೆ ನಿಮಿತ್ತ ಸ್ಥಳೀಯ ಜೆವಿ ಮಂಡಳ ಸ್ವತಂತ್ರ ಪಿಯು ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ನೀಡಿದರು. ಇತ್ತೀಚೆಗೆ ಯುವಕರೇ ಹೆಚ್ಚಾಗಿ ಅಪರಾಧ ಮಾಡುವುದು, ದುಶ್ಚಟಗಳಿಗೆ ಬಲಿಯಾಗುವುದು ಆಗುತ್ತಿದೆ. ಇದು ನಿಜಕ್ಕೂ ವಿಷಾದನೀಯ. ವಿದ್ಯಾರ್ಥಿ ಜೀವನವನ್ನು ಹಾಳು ಮಾಡಿಕೊಳ್ಳದೆ ಭವಿಷ್ಯದಲ್ಲಿ ಸಮಾಜಮುಖಿಯಾಗಿ ಬೆಳೆದು ಉಜ್ವಲ ಭವಿಷ್ಯ ಹೊಂದಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಕಾರ್ಯದರ್ಶಿ ಡಾ. ಜೆ.ಬಿ. ಆಲಗೂರ ವಿದ್ಯಾರ್ಥಿಗಳು ಧೂಮಪಾನ, ಮದ್ಯಪಾನಗಳಿಗೆ ಅಂಟಿಕೊಳ್ಳುವುದು ಹೆಚ್ಚಾಗಿದೆ. ಇದು ಆರೋಗ್ಯದ ಮೇಲೆ ಪರಿಣಾಮ ಬೀರುವುದಲ್ಲದೆ ಜೀವನವನ್ನು ಹಾಳು ಮಾಡುತ್ತದೆ ಎಂಬುದನ್ನು ಅರಿಯಬೇಕೆಂದು ಕಿವಿಮಾತು ಹೇಳಿದರು. ಪ್ರಾಚಾರ್ಯ ಸಂತೋಷ ಕುಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಲೇಜು ಹಾಗೂ ಠಾಣೆ ಸಿಬ್ಬಂದಿ ಇದ್ದರು.

# ವಾರ್ಷಿಕೋತ್ಸಚ ನಿಮಿತ್ತ ಕ್ರೀಡಾಕೂಟ: ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಿ



ತೇರದಾಳ : ದಿನಗಳ ಕಳೆದಂತೆ ಪ್ರತಿಯೊಂದು ಕ್ಷೇತ್ರಗಳಲ್ಲಿ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಸರಕಾರಗಳು ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ಆದ್ದರಿಂದ ಪ್ರತಿಭಾವಂತ ವಿದ್ಯಾರ್ಥಿಗಳು ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಿದ್ದೇಶ್ವರ ವಿದ್ಯಾವರ್ಧಕ ಸಂಘದ ಆಡಳಿತಾಧಿಕಾರಿ ಎಂ.ಬಿ. ಮಾಳೇದ ಹೇಳಿದರು.

ಸಂಸ್ಥೆಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ವಾರ್ಷಿಕೋತ್ಸವ ನಿಮಿತ್ತ ಹಮ್ಮಿಕೊಂಡಿದ್ದ ಕ್ರೀಡಾಕೂಟ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕ್ರೀಡೆಗಳಲ್ಲಿ ಸೋಲು ಗೆಲವು ಸಹಜ. ಎರಡನ್ನು ಸಮನಾಗಿ ಸ್ವೀಕರಿಸಬೇಕು. ಕ್ರೀಡೆ ಕೇವಲ ಒಂದು ಆಟವಲ್ಲ. ಬದಲಾಗಿ ಉತ್ತಮ ಆರೋಗ್ಯದ ಬೆಳವಣಿಗೆಯಾಗಿದೆ ಎಂದು ಹೇಳಿದರು. ಶಿಕ್ಷಕ ಬಿ.ಟಿ. ಪತ್ತಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಥಮಿಕ ವಿಭಾಗದ ಚೇರಮನ್ ಎಂ.ಕೆ. ಮಿರ್ಜಿ ಅಧ್ಯಕ್ಷತೆ ವಹಿಸಿದ್ದರು. ಎಸ್.ಎಸ್. ಬೆಳಗಲಿ ಕ್ರೀಡಾ ಪ್ರಮಾಣವಚನ ಬೋಧಿಸಿದರು. ಮಲ್ಲಪ್ಪ ಮುಕರಿ, ಈಶ್ವರ ಕಿತ್ತೂರ, ಪರಪ್ಪ ಅಥಣಿ, ಶ್ರೀಶೈಲ ಹೊಸಮನಿ, ಡಿ.ಎ. ಉಗಾರ, ಬಿ.ಜಿ. ಮುದಕನ್ನವರ ಮತ್ತಿತರಿದ್ದರು.

# ಯುವ ಬ್ರಿಗೇಡ ವತಿಯಿಂದ ಕಣಕಣದಲ್ಲೂ ಶಿವ ಕಾರ್ಯಕ್ರಮ: 250 ಕ್ಕೂ ಹೆಚ್ಚು ಫೋಟೊಗಳಿಗೆ ಕಾಯಕಲ್ಪ



ರಬಕವಿ-ಬನಹಟ್ಟಿ: ರಬಕವಿ ಬನಹಟ್ಟಿ ಯುವ ಬ್ರಿಗೇಡ್ ಆಶ್ರಯದಲ್ಲಿ ಕಣಕಣದಲ್ಲೂ ಶಿವ ಕಾರ್ಯಕ್ರಮದ ಅಂಗವಾಗಿ ಕೃಷ್ಣಾ ನದಿ ತೀರದಲ್ಲಿರುವ 250 ಕ್ಕೂ ಹೆಚ್ಚು ದೇವರ ಫೋಟೊಗಳಿಗೆ ಕಾಯಕಲ್ಪ ನೀಡಲಾಯಿತು.

ಭಾನುವಾರ ನದಿ ತೀರದಲ್ಲಿ ಇಡಲಾಗಿದ್ದ ಫೋಟೊಗಳನ್ನು ಒಂದೆಡೆ ಕಲೆ ಹಾಕಿದ ನಂತರ ಅವುಗಳ ಫೋಟೋಫ್ರೇಮ್, ಗ್ಲಾಸ್ ಮತ್ತು ಭಾವಚಿತ್ರಗಳನ್ನು ಬೇರ್ಪಡಿಸಲಾಯಿತು. ನಂತರ ಬೇರ್ಪಡಿಸಿದ ಪಟಗಳನ್ನು ಒಂದು ಗುಂಡಿಯಲ್ಲಿ ಹಾಕಿ ಮುಚ್ಚಲಾಯಿತು. ಗುಂಡಿಯ ಮೇಲೆ ಯುವ ಬ್ರಿಗೇಡ್ ಸದಸ್ಯರು ಸಸಿಯನ್ನು ನೆಟ್ಟರು. ನದಿ ತೀರವನ್ನು ಕೂಡಾ ಸ್ವಚ್ಛಗೊಳಿಸಿದರು.

ಈ ಕಾರ್ಯಕ್ರಮದಲ್ಲಿ ಯುವಾ ಬ್ರಿಗೇಡ್ ತಾಲೂಕ ಸಂಚಾಲಕರಾದ ಕಾಡೇಶ ನ್ಯಾಮಗೌಡ, ಯುವಾ ಬ್ರಿಗೇಡ್ ಕಾರ್ಯಕರ್ತರಾದ ರಾಹುಲ ಉಪಾಧ್ಯೆ, ಕೇಶವ ಭಸ್ಮೆ, ವಕೀಲರಾದ ಬಸವರಾಜ ನಾಯಕ, ಅರ್ಜುನ ಜಿಡ್ಡಿಮನಿ ಹಾಗೂ ಬನಹಟ್ಟಿಯ ಹಿರಿಯರಾದ ವಿರುಪಾಕ್ಷಯ್ಯ ಮಠದ, ನಂದು ಗಾಯಕವಾಡ ಹಾಗೂ ವಿವಿಧ ಸಂಘಟನೆಗಳ ಹಲವು ಕಾರ್ಯಕರ್ತರು ಭಾಗವಹಿಸಿದ್ದರು.

# ಕಾಲತಿಪ್ಪಿ ಗ್ರಾಮದಲ್ಲಿ ಕಾರ್ತಿಕೋತ್ಸವ: ಬದುಕಿನ ನೆಮ್ಮದಿಗೆ ಆಂಜನೇಯನ ಸ್ಮರಣೆ ಅಗತ್ಯ



ತೇರದಾಳ : ತನ್ನ ಅಪಾರ ಭಕ್ತಿಯಿಂದ ಗುರು ಶ್ರೀರಾಮರನ್ನೆ ಮೀರಿಸಿದ ತುಳಸಿದಾಸ ಆಂಜನೇಯನ ಭಕ್ತಿಗೆ ಸರಿಸಾಟಿ ಇಲ್ಲ. ಬದುಕಿನ ನೆಮ್ಮದಿಗೆ ಆಂಜನೇಯನ ಸ್ಮರಣೆ ಅಗತ್ಯವಾಗಿದೆ ಎಂದು ರಬಕವಿ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರ ಶ್ರೀಗಳು ಹೇಳಿದರು.

ಕಾಲತಿಪ್ಪಿ ಗ್ರಾಮದಲ್ಲಿ ಕಾರ್ತಿಕ ಮಾಸದ ನಿಮಿತ್ತ ಹನುಮಾನ ಭಕ್ತ ಮಂಡಳಿ ಹಮ್ಮಿಕೊಂಡಿದ್ದ ಸದ್ವಿಚಾರದ ನುಡಿ ಬೆಳಕು ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಆಂಜನೇಯ ವೀರಭದ್ರೇಶ್ವರ ದೇವರಿಂದ ಲಿಂಗಧಾರಣೆ ಲಿಂಗದಿಕ್ಷೆ ಪಡೆದಿದ್ದಾನೆಂದು ಪುರಣದಲ್ಲಿ ಉಲ್ಲೇಖವಿದ್ದು, ವಿಶ್ವಗುರು ಬಸವಣ್ಣ ಆಂಜನೇಯನಿಗೂ ಸಾಮತ್ಯೆ ಇದೆ ಎಂದು ವಿಶ್ಲೇಷಿಸಿದರು. ತುಂಗಳ-ಝುಂಜರವಾಡದ ಬಸವಲಿಂಗ ದೇವರು, ವಿಶ್ರಾಂತ ಶಿಕ್ಷಕ ಶಿವಾನಂದ ದಾಶ್ಯಾಳ ಮನುಷ್ಯ ಸತ್ಸಂಗದಲ್ಲಿ ಪಾಲ್ಗೊಳ್ಳುವುದರಿಂದ ಜೀವನ ಶೈಲಿಯೇ ಬದಲಾಗುತ್ತದೆ. ಸತ್ಸಂಗಕ್ಕೆ ಅಷ್ಟೊಂದು ಶಕ್ತಿ ಇದೆ. ಆದ್ದರಿಂದ ಆಧ್ಯಾತ್ಮವನ್ನು ನಿರ್ಲಕ್ಷ್ಯ ಮಾಡದಿರಿ ಎಂದು ಹೇಳಿದರು.

# ರಾಜ್ಯ ಮಟ್ಟದ ಕರಾಟೆಯಲ್ಲಿ ಅಂಬಿಕಾ ಸಾಧನೆ



ಬಾಗಲಕೋಟೆ : ತುಮಕೂರಿನಲ್ಲಿ ಇತ್ತೀಚೆಗೆ ರಾಜ್ಯ ಮಟ್ಟದಲ್ಲಿ ನಡೆದ ಕರಾಟೆ (ಟೈಕೊಂಡ) ಕ್ರೀಡೆಯಲ್ಲಿ ಬಾಗಲಕೋಟೆಯ ಸರಕಾರಿ ಬಾಲಕಿಯರ ಬಾಲಮಂದಿರದ ಪ್ರಥಮ ಪಿಯುಸಿ ಕಲಾವಿಭಾಗದಲ್ಲಿ ಓದುತ್ತಿರುವ ವಿದ್ಯಾರ್ಥಿ ಅಂಬಿಕಾ ಬೋವೆರ್ ದ್ವಿತೀಯ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಬಾಲಕಿಯ ಸಾಧನೆಗೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಜಿಲ್ಲಾ ಸತ್ರ ನ್ಯಾಯಾಲಯದ ಶೀಘ್ರಗತಿ ನ್ಯಾಯಾಲಯದ ನ್ಯಾಯಾಧೀಶ ಸಯ್ಯದ್ ಬಳೆಗೂರ ರೆಹಮಾನ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದ್ಯಾವಪ್ಪ ಎಸ್.ಬಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪನಿರ್ದೇಶಕ ಅಮರೇಶ ಎಚ್, ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರಕಾಶ ಬೇವೂರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಸ್ತಗಿರಿಸಾಬ ಮುಲ್ಲಾ, ಬಾಲಮಂದಿರದ ಅಧೀಕ್ಷಕಿ ಜಯಮಾಲಾ ದೊಡಮನಿ ಅಭಿನಂದನೆ ಸಲ್ಲಿಸಿದ್ದಾರೆ.

# ನಾಲ್ಕೂ ವರ್ಣಗಳು ಶ್ರೇಷ್ಠವಾದದ್ದು: ಪಂ. ನರಹರಿ ಆಚಾರ್ಯ




ವಿಜಯಪುರ : ಬ್ರಾಹ್ಮಣ, ಕ್ಷತ್ರೀಯ, ವೈಷ್ಯ ಹಾಗೂ ಶೂದ್ರ ಇವು ಒಂದರ ಮೇಲೆ ತಳಹದಿಯ ಆಧಾರದ ಮೇಲೆ ನಿಂತು ಬದುಕು ಸಾಗಿಸಿ ಸಮಾಜದ ಉದ್ದಾರದ ಕಡೆಗೆ ತಗೆದುಕೊಂಡು ಹೋಗುವದರಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂದು ಮುತ್ತಗಿಯ ಅರ್ಚಕ ಪಂ. ನರಹರಿ ಆಚಾರ್ಯ ಜೋಶಿ ಅವರು ಹೇಳಿದರು.

ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ವಿಜಯಪುರ ಇದರ ಆಶ್ರಯದಲ್ಲಿ ಪ್ರತಿತಿಂಗಳು ನಡೆಸುತ್ತಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂತ ಕನಕದಾಸರ ಮೋಹನ ತರಂಗಿಣಿ ಕುರಿತು ಉಪನ್ಯಾಸ ನೀಡುತ್ತದ್ದ ಅವರು ಕನಕದಾಸರ ಈ ಕೃತಿಯಲ್ಲಿಯೂ ಧರ್ಮದ ತಳಹದಿಯ ಮೇಲೆ ನಿಂತ ಪ್ರಸಂಗದ ವಿವರಣೆಯನ್ನು ನೀಡಿ ಬ್ರಾಹ್ಮಣ ಓದಿದರೇ, ಅವನಿಗೆ ಕ್ಷತ್ರೀಯನೆಂಬ ಶಕ್ತಿ ಬರಬೇಕು, ಈ ಶಕ್ತಿ ಬರಲು ಆಹಾರ ಬೇಕಾದರೆ ವೈಷ್ಯನ ಆಹಾರ ಸೇವಿಸಿ ಶಕ್ತಿ ಉಂಟಾಗಲು ದೇಹ ಶೂದ್ರನ ಪಾದ ಮೇಲೆ ನಿಂತಿರುತ್ತದೆ, ನಮಸ್ಕಾರ ಮಾಡುವದು ಶಿರಕ್ಕಲ್ಲ ಪಾದಕ್ಕೆ ಎಂಬುದು ಅರಿತುಕೊಂಡು ನಾಲ್ಕು ವರ್ಣಗಳು ಯಾವ ರೀತಿಯಲ್ಲಿ ಶ್ರೇಷ್ಠವಾದುದು ಎಂಬುದನ್ನು ಸೂಕ್ಷ್ಮವಾಗಿ ಅರಿಯಲು ಸಾಧ್ಯ ಎಂದವರು ಹೇಳಿದರು.

ಜಗತ್ತನ್ನು ನಾವು ನೋಡದೇ ಜಗತ್ತು ನಮ್ಮನ್ನು ನೋಡುವಂತೆ ನಾವಾಗಬೇಕು ಎಂದು ಹೇಳಿ ನಿರಂತರ ಅಭ್ಯಾಸದ ಛಲ ಇರಬೇಕು, ಹೊಗಳೂವ ಭಾವನೆ ಇರಬೇಕು, ಹರಿಯುವ ನೀರದಂತಿರಬೇಕು ಎಂದು ಎಲ್ಲಾ ಧರ್ಮದ ಸಾರವನ್ನು ಹೇಳುತ್ತದೆ ಅದನ್ನು ಸಾಧಿಸಿದಾಗಲೇ ಜೀವನಕ್ಕೆ ಒಂದು ಬೆಲೆ ಬರಲು ಸಾಧ್ಯ ಎಂದರು. ನಮ್ಮಲ್ಲಿ ಸಂಸ್ಕಾರ ಬೆಳೆಯುವಲ್ಲಿ ನಮ್ಮ ಧರ್ಮವನ್ನು ನಾವು ಯಾವಾಗಲೂ ಕಾಪಾಡಿಕೊಂಡಾಗ ಧರ್ಮ ನಮ್ಮನ್ನು ರಕ್ಷೀಸುತ್ತದೆ ಎಂದರು.

ವಿವೇಕಾಂದರ ಕುರಿತು ವಿಶೇಷ ಉಪನ್ಯಾಸ ಮಾಡಿ, ಸ್ವಲ್ಪವನ್ನಾದರೂ ಓದಿದರೇ ಬದಲಾವಣೆ ಕಾಣಲು ಸಾಧ್ಯ ವಿವೇಕಾನಂದರು ಏಕಾಗ್ರತೆಯಿಂದ ಮನಸ್ಸು ಬುದ್ದಿಮತ್ಯೆಯನ್ನು ಒಂದೇ ಕಡೆ ಇಟ್ಟು ಓದುವ ಕಲೆ ವಿವೇಕಾನಂದರಲ್ಲಿ ಇತ್ತು ಎಂದು ಸಾಹಿತಿ ಸುಭಾಷ ಯಾದವಾಡ ಅವರು ವಿವೇಕಾನಂದರ ತತ್ವದರ್ಶನ, ದಾರೀದೀಪ ಹಾಗೂ ಮಾರ್ಗದರ್ಶನ ಕುರಿತು ಮಾರ್ಮಿಕವಾಗಿ ಹೇಳಿದರು. ಇಂತಹ ಧೃಡತೆಯನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕೆಂದರು.

ವಿರೋಧಿಗಳು, ಆಸಕ್ತಿ ಇಲ್ಲದವರನ್ನು ಬೇಗನೇ ತಮ್ಮಲ್ಲಿ ಸೆಳೆಯುವ ಕ್ಷಾಣಾಕ್ಷತೆ ವಿವೇಕಾನಂದರಲ್ಲಿ ಇತ್ತು ಎಂಬುವದಕ್ಕೆ ಸ್ಟೇಶನ್ ಮಾಸ್ತರ ಸೇರಿದಂತೆ ಹಲವರು ಬದಲಾವಣೆಯಾದ ರೀತಿಗಳನ್ನು ಸಮಗ್ರವಾಗಿ ಬಿಚ್ಚಿಟ್ಟರು.

ದೇಶದ ಸಂಸ್ಕೃತಿ ಉಳಿಸುವಲ್ಲಿ ಇಂತಹ ರಸವತ್ತಾದ ಕಾರ್ಯಕ್ರಮಗಳನ್ನು ಹುಟ್ಟುಹಾಕಿ ಪೋಷಣೆ ಮಾಡುತ್ತಿರುವ ಎಸ್.ಎ.ಜಿದ್ದಿ ಹಾಗೂ ಕಾಳಿದಾಸ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯ ಕಾರ್ಯವನ್ನು ಮೆಚ್ಚಲೇಬೇಕು ಎಂದು ಮಹಿಳಾ ಹೋರಾಟಗಾರ್ತಿ ಶ್ರೀಮತಿ ವಿದ್ಯಾವತಿ ಅಂಕಲಗಿ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ವಿದ್ಯಾರ್ಥಿಗಳಿಗೂ ದೇಶದ ಸಂಸ್ಕೃತಿ,

ಋಷಿ ಮುನಿಗಳ ತತ್ವಾಚರಣೆ ಇಂದು ಅವಶ್ಯವಾಗಿದೆ ಇಂತಹ ಕಾರ್ಯ ನಡೆದಾಗಲೇ ನಮ್ಮ ಮೂಲ ಪುರುಷರು ನಡೆದುಬಂದ ದಾರಿ ಅರಿವಾಗಿ ದೇಶದ ಅಭಿವೃದ್ದಿಗೆ ಹೋರಾಟಮಾಡುವದು ಖಂಡಿತ ಎಂದರು. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿ ಅದಕ್ಕೆ ಸರ್ವರ ಶಕ್ತಿ ಅವಶ್ಯ ಎಂದು ಅಂಕಲಗಿ ಕರೆನೀಡಿದರು.

ಬಸವಣ್ಣನ ವಚನವನ್ನು ನಿವೃತ್ತ ಉಪನಿಬಂಧಕರಾದ ಬಿ.ಆರ್.ಬನಸೋಡೆ ಅವರು ಹಾಡಿ, ಕಲಿಯುದರಲ್ಲಿಯೇ ಸಂತೋಷವಿದೆ ಎಂದು ತೋರಿಸಿಕೊಟ್ಟ ರಾಮಕೃಷ್ಣ ಪರಮಹಂಸರ ವಿಚಾರಧಾರೆಗಳನ್ನು ಕೊಂಡಾಡಿದರು.

ಸಣ್ಣ ಸಂಸ್ಥೆಯಾದರೂ ಕೆಲಸ ಮಾತ್ರ ದೊಡ್ಡದು, ಇಂತಹ ಉತ್ತಮ ದೇಶ ಕಟ್ಟುವ ಕಾರ್ಯದ ಸಂಸ್ಕೃತಿ ಉಳಿಸಿ-ಬೆಳೆಸಿ ನೀತಿ ಬೋಧನೆ ಕಾರ್ಯಗಳನ್ನು ನಡೆಸುತ್ತಿರುವ ಜಿದ್ದಿ ಅವರ ಛಲ ಅಪಾರವಾದುದು. ಇದು ಮುಂದೆ ಸಾಗಲಿ ಇದಕ್ಕೆ ಒಂದಿಲ್ಲೊಂದು ದಿನ ಬೆಲೆ ಬರಲೇ ಬೇಕು ಎಂದು ನಿವೃತ್ತ ಪ್ರಾಚಾರ್ಯ ವಿ.ಡಿ.ವಸ್ತ್ರದ ಬಣ್ಣಿಸಿದರು.

ಸಂಸ್ಥೆಯ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎಸ್. ಎ. ಜಿದ್ದಿ ಅವರು ಅಧ್ಯಕ್ಷತೆ ವಹಿಸಿದ್ದರು ಬಸವರಾಜ ಮೇಟಿ, ಸಿದ್ದನಗೌಡ ಶಿವಣಗಿ, ನ್ಯಾಯವಾದಿ ಕೆ.ಎಫ್.ಅಂಕಲಗಿ, ಕೆ.ಆರ್.ನಾಗೋಡ, ನಿವೃತ್ತ ಶಿಕ್ಷಕ ಕುಲಕರ್ಣಿ, ಆಡಳಿತಾಧಿಕಾರಿ ಆರ್. ಎಸ್. ವಾಡೇದ, ವಿ.ಎಸ್.ಶಿರೋಳ, ವಿ.ಎಸ್. ಕುಲಕರ್ಣಿ, ಮಿನಾಕ್ಷಿ ಆಸಂಗಿ, ಕಡಕೋಳ ಗುರುಗಳು, ಬಿ.ಟಿ.ಜಿದ್ದಿ ಹಾಗೂ ತಾಜಪೂರ, ಕಕಮರಿಯ ಶಿಕ್ಷಕರುಗಳು ಸಿಬ್ಬಂದಿ ಭಾಗವಹಿಸಿದ್ದರು. ವಿದ್ಯಾರ್ಥಿಗಳು ತದೇಕಚಿತ್ತದಿಂದ ಇಂತಹ ಸಂಸ್ಕೃತಿ ವಿಚಾರಧರೆಗಳನ್ನು ಆಲಿಸುತ್ತದ್ದರು.

ಪ್ರಾರಂಭದಲ್ಲಿ ಜಿ.ಎಚ್.ಮುರನೂರ ಅವರಿಂದ ಪ್ರಾರ್ಥನಾ ಗೀತೆ ನಡೆಯಿತು. ಪ್ರಾಚಾರ್ಯ ಕೆ.ಆರ್.ಜಾಧವ ಸರ್ವರನ್ನು ಸ್ವಾಗತಿಸಿದರು ಕಾರ್ಯಕ್ರಮ ನಿರೂಪಣೆಯನ್ನು ಇಲ್ಲಿ ಕಾರ್ಯ ಮಾಡಿ ಸಿದ್ದಾಪುರದಲ್ಲಿ ಉಪನ್ಯಾಸಕನಾಗಿ ಕಾರ್ಯನಿರ್ವಹಿಸಿತ್ತಿರುವ ಡಿ.ಬಿ.ದೊಡಮನಿ ಅವರು ಕಾರ್ಯಕ್ರಮಕ್ಕೆ ಪ್ರಾವಿಣ್ಯತೆ ಬರವ ರೀತಿಯಲ್ಲಿ ಬಹು ಮಾರ್ಮಿಕವಾಗಿ ನಡೆಸಿಕೊಟ್ಟರು.

ಕೊನೆಯಲ್ಲಿ ವಂದನಾರ್ಪಣೆಯನ್ನು ಆರ್. ಎನ್. ಕಂಬಾರ ಅವರು ಮಾಡಿದರು.

# ಬೆಳಗಾವಿ ಅಧಿವೇಶನದ ಉಭಯ ಸದನಗಳಲ್ಲಿ ಪ್ರತಿಧ್ವನಿಸಿದ ಮಹಾಲಿಂಗಪುರ ತಾಲೂಕು ಹೋರಾಟ



ಮಹಾಲಿಂಗಪುರ : ಹಿಂದಿನ ಬಸವರಾಜ ಬೊಮ್ಮಾಯಿ ಸರ್ಕಾರ ಮಹಾಲಿಂಗಪುರ ತಾಲೂಕು ಕೇಂದ್ರಕ್ಕೆ ಆದೇಶ ಮಾಡಿದ್ದು, ದಾಖಲೆ ಪರಿಶೀಲಿಸಿ ಗೆಜೆಟ್ ಮೂಲಕ ಪಟ್ಟಣವನ್ನು ತಾಲೂಕು ಘೋಷಣೆ ಮಾಡಿ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಕಂದಾಯ ಮಂತ್ರಿ ಕೃಷ್ಣ ಭೈರೇಗೌಡ ಅವರನ್ನು ಒತ್ತಾಯಿಸಿದರು.

ಬೆಳಗಾವಿಯ ಚಳಿಗಾಲ ಅಧಿವೇಶನದಲ್ಲಿ ಬುಧವಾರ ಸದನದ ಶೂನ್ಯ ವೇಳೆಯಲ್ಲಿ ಮಹಾಲಿಂಗಪುರ ಪಟ್ಟಣ ತಾಲೂಕು ಘೋಷಣೆ ಪ್ರಯುಕ್ತ ಪ್ರಸ್ತಾಪ ಮಾಡಿ ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ತಾಲೂಕಿನ ಮಾನದಂಡ ಪ್ರಕಾರ ಇರುವ ಅರ್ಹತೆಗಳನ್ನು ವಿವರಿಸಿ ಮಾತನಾಡಿದರು.

ಮಹಾಲಿಂಗಪುರ ತಾಲೂಕಿಗಾಗಿ ಸುತ್ತಮುತ್ತಲಿನ ಗ್ರಾಮಗಳ ಜನತೆ ಸಹಿತ ಸ್ಥಳೀಯರು ಕಳೆದ 40ವರ್ಷಗಳಿಂದ ಮತ್ತು ಇತ್ತೀಚೆಗೆ 600 ದಿನಗಳಿಂದ ವರ್ಷ ಧರಣಿ ಸತ್ಯಾಗ್ರಹ ಮುಂದುವರೆದು ಡಿಸೆಂಬರ್ 1ರಿಂದ ಐದಾರು ದಿನಗಳು ಆಮರಣ ಉಪವಾಸ ಸತ್ಯಾಗ್ರಹ ಕೂಡ ನಡೆದಿದೆ. ಸ್ಥಳೀಯವಾಗಿ ಯಾವುದೇ ಅಚಾತುರ್ಯಕ್ಕೆ ಕಾರಣವಾಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು. ನಿಯೋಜಿತ ಮಹಾಲಿಂಗಪುರ ತಾಲೂಕಿನಲ್ಲಿ 1 ಪುರಸಭೆ, 1 ಪಟ್ಟಣ ಪಂಚಾಯಿತಿ ಸೇರಿ ಒಟ್ಟು 12 ಹಳ್ಳಿಗಳಿಂದ 1ಲಕ್ಷ 50ಸಾವಿರ ಜನಸಂಖ್ಯೆಯನ್ನು ಮೀರಿದೆ. ತಾವು ಕಡಿಮೆ ಜನಸಂಖ್ಯೆ ಮತ್ತು ಕಡಿಮೆ ಹಳ್ಳಿಗಳನ್ನು ಹೊಂದಿರುವ ಪ್ರದೇಶಗಳನ್ನು ತಾಲೂಕು ಕೇಂದ್ರಗಳೆಂದು ಘೋಷಣೆ ಮಾಡಿದ್ದಿರಿ.

ಮುಧೋಳ ತಾಲೂಕಿನಲ್ಲಿಯೇ ದೊಡ್ಡ ಪಟ್ಟಣ. ಮಹಾಲಿಂಗಪುರ ಎಲ್ಲ ಆಯಾಮಗಳಲ್ಲಿ ಕಂದಾಯ ಮಾನದಂಡಗಳನ್ನು ಹೊಂದಿರುವ ಕಾರಣ, ತಾವು ಇನ್ನೊಮ್ಮೆ ಪರಿಶೀಲನೆ ಮಾಡಿ ತಾಲೂಕಿಗಾಗಿ ಗೆಜೆಟ್ ಮಂಡಿಸಿ ಸ್ಥಳೀಯರ ಬಹು ದಿನಗಳ ತಾಲೂಕು ಬೇಡಿಕೆಯನ್ನು ಈಡೇರಿಸಬೇಕೆಂದು ಕಂದಾಯ ಸಚಿವರನ್ನು ಒತ್ತಾಯಿಸಿದರು.

ಸದನದಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಉತ್ತರ ನೀಡುತ್ತಾ, ಈಗಾಗಲೇ ಜಮಖಂಡಿ ತಾಲೂಕಿನಲ್ಲಿಯ 31 ಗ್ರಾಮಗಳಲ್ಲಿ ರಬಕವಿ-ಬನಹಟ್ಟಿಯಲ್ಲಿ 22 ಮತ್ತು ತೇರದಾಳದಲ್ಲಿ 9 ಗ್ರಾಮಗಳ ಸೇರ್ಪಡೆಗೊಳಿಸಿ ತಾಲೂಕುಗಳನ್ನಾಗಿ ಮಾಡಲಾಗಿದೆ. ಇನ್ನುಳಿದ 22 ಗ್ರಾಮಗಳನ್ನು ವಿಭಜನೆ ಮಾಡಿ ತಾಲೂಕು ಮಾಡುವ ಯಾವುದೇ ಪ್ರಸ್ತಾಪ ನಮ್ಮ ಕಡತದಲ್ಲಿ ಇರುವುದಿಲ್ಲ.

ತೇರದಾಳ ಶಾಸಕ ಸವದಿ ಅವರು ಮತ್ತೊಮ್ಮೆ ಕಂದಾಯ ಸಚಿವರಿಗೆ ಮಹಾಲಿಂಗಪುರ ಪಟ್ಟಣ ಅವಿಭಜಿತ ಮುಧೋಳ ತಾಲೂಕಿನಲ್ಲಿ ಬರುತ್ತದೆ ಎಂದು ಮನವರಿಕೆ ಮಾಡಿಕೊಟ್ಟರು. ನಂತರ ಸಚಿವರು 63 ತಾಲೂಕುಗಳಲ್ಲಿ 40ಕ್ಕೆ ಇನ್ನೂ ಹಣ ಒದಗಿಸಲು ಆಗುತ್ತಿಲ್ಲ. ಆದರೂ ಸಹಿತ ಹಾಗೇನಾದರೂ ಹಿಂದಿನ ಸರ್ಕಾರದ ಆದೇಶ ಕಡತದಲ್ಲಿ ದೊರಕಿದರೆ ಪೂರ್ವಾಪರ ವಿಚಾರ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಈಗ ಹೋರಾಟಗಾರರು ಯಾವುದೇ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳದೆ ಧರಣಿ ಸತ್ಯಾಗ್ರಹವನ್ನು ಕೈ ಬಿಡಬೇಕೆಂದು ಮನವಿ ಮಾಡಿದರು.

ವಿಧಾನ ಪರಿಷತ್‌ನಲ್ಲೂ ಚರ್ಚೆ : ಎರಡು ದಿನಗಳ ಹಿಂದೆ ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಅವರು ವಿಧಾನಪರಿಷತ್ ಅಧಿವೇಶನದಲ್ಲಿ ಮಹಾಲಿಂಗಪುರ ತಾಲೂಕು ಹೋರಾಟದ ಸಂಪೂರ್ಣ ವಿವರವನ್ನು ಚರ್ಚಿಸಿ, ತಾಲೂಕು ರಚನೆಗಾಗಿ ಒತ್ತಾಯಿಸಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS,** Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State